# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (246) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ||ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು, ಇವರನ್ನು ಸರ್ಕಾರದ ಆದೇಶದಂತೆ, ಬೆಳಗಾಂ ಮಹಾನಗರ ಪಾಲಿಕೆಯಿಂದ ಬೆಂಗಳೂರು ಮಹಾನಗರ ಪಾಲಿಕೆಗೆ 1996ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯ 91-ಎ ಪ್ರಕರಣದಡಿಯಲ್ಲಿ ದಿನಾಂಕ:30/06/1988ರಲ್ಲಿ ವರ್ಗಾವಣೆ ಮಾಡಲಾಗಿರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರವರ ಜ್ಞಾಪನಾ ಪತ್ರದಂತೆ ಸದರಿಯವರನ್ನು ಕರ್ತವ್ಯದ ಮೇಲೆ ಹಾಜರಾತಿ ತೆಗೆದುಕೊಂಡು ಬೆಂಗಳೂರು ಮಹಾನಗರ ಪಾಲಿಕೆಯ ಬಂಡಿಮಟ್ ಆಸ್ಪತ್ರೆಯಲ್ಲಿ ಖಾಲಿ ಇರುವ ಸಹಾಯಕ ಶಸ್ತ್ರಚಿಕಿತ್ಸಕರ ಹುದ್ದೆಗೆ ನಿಯೋಜಿಸಲಾಗಿದೆ.

ಆಯುಕ್ತರವರ ಕಛೇರಿ ಆದೇಶದಂತೆ, ಸದರಿಯವರನ್ನು 2002-03ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡಿ ದಿನಾಂಕ:10/01/2003ರಂದು ಸೇವೆಯಿಂದ ಬಿಡುಗಡೆ ಮಾಡಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು ಇಲ್ಲಿಗೆ ಹಾಜರಾಗಲು ಸೂಚಿಸಲಾಗಿದೆ. ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿ ದಿನಾಂಕ:20/01/2006ರಂದು ಪಾಲಿಕೆಯಲ್ಲಿ ಹಾಜರಾತಿ ಹೊಂದಿರುತ್ತಾರೆ. ಇವರ ಹಾಜರಾತಿಯನ್ನು ಪರಿಗಣಿಸಿ ವಿಲ್ಸನ್ ಗಾರ್ಡನ್ ಔಷಧಾಲಯದಲ್ಲಿ ಕಾರ್ಯನಿರ್ವಹಿಸಲು ನೇಮಿಸಲಾಗಿದೆ. ಮುಂದುವರೆದಂತೆ, ಸದರಿ ವೈದ್ಯರಿಗೆ 1993 ರಿಂದ ತಹಲ್‌ವರೆವಿಗೂ ಪಾಲಿಕೆಯಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡಲಾಗಿರುತ್ತದೆ.

ಸದರಿಯವರು ದಿನಾಂಕ:17/01/2007 ರಂದು ಮನವಿ ಸಲ್ಲಿಸಿ, ಪಾಲಿಕೆಯಲ್ಲಿ ಇವರ ಸೇವೆಯನ್ನು ಕ್ರಮಬದ್ಧಗೊಳಿಸಿ, ಕಾಲಮಿತಿ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಲಾಗಿ, ಕಛೇರಿ ಪತ್ರದಲ್ಲಿ ಸದರಿಯವರ ಮನವಿಯ ಬಗ್ಗೆ ಕೆ.ಎಂ.ಸಿ ಕಾಯ್ದೆ 1976ರ 91/ಎ ಅಧಿನಿಯಮದಂತೆ ಕ್ರಮವಹಿಸಲು ಅನುಮೋದನೆ ನೀಡಲು ಸರ್ಕಾರ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿರವರಿಗೆ ದಿನಾಂಕ:20/06/2008 ರಂದು ಪತ್ರ ಬರೆಯಲಾಗಿರುತ್ತದೆ.

ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿ ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

"...the proposed absorption of Dr. Sarojini Karning, Asst. Surgeon now working under the hands of BBMP into the services of the BBMP is were to be made from retrospective date, i.e. from date on which she is working in Bangalore City Corporation on transfer from the Corporation of City of Belgaum, she will have to be placed in the seniority list above the Doctors who have been appointed after the date of her transfer. It is not permissible under law."

.................2

ಆದ್ದರಿಂದ ಸದರಿ ವೈದ್ಯರಿಗೆ ಮೇಲ್ಕಂಡ ಅಭಿಪ್ರಾಯವನ್ನು ತಿಳಿಸಿ, ಅವಶ್ಯಕವಿದ್ದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡುವಂತೆ ಅಥವಾ ಅಗತ್ಯವಿದ್ದಲ್ಲಿ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ದಿನಾಂಕ:25/05/2011ರ ಪತ್ರದಲ್ಲಿ ತಿಳಿಸಿರುತ್ತಾರೆ. ಇದರ ವಿರುದ್ಧ ಡಾ॥ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ದಿನಾಂಕ:25/05/2011ರಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿರವರು ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ಸರ್ಕಾರಕ್ಕೆ 2 ತಿಂಗಳ ಗಡುವು ನೀಡಿ ನೌಕರರ ಮನವಿಯನ್ನು ಕಾನೂನಿನಡಿಯಲ್ಲಿ ಪುನರ್ ಪರಿಶೀಲಿಸುವಂತೆ ಆದೇಶಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಪರಿಶೀಲಿಸಿ ಅಭಿಪ್ರಾಯ ನೀಡಲು ಕಡತವನ್ನು ಪಾಲಿಕೆಯ ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಲಾಗಿ, ಸದರಿಯವರು ದಿನಾಂಕ:30/05/2012ರಂದು ನೀಡಿರುವ ವರದಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಶೀಘ್ರವಾಗಿ ಅರ್ಜಿದಾರರ ಮನವಿಯನ್ನು ಪರಿಗಣಿಸಿ ಸ್ಪಷ್ಟ ಆದೇಶ ಹೊರಡಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಹಾಲಿ ಪಾಲಿಕೆಯಲ್ಲಿ 91 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಿದ್ದು 15 ಹುದ್ದೆಗಳು ಖಾಲಿ ಇರುತ್ತವೆ. ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಶಸ್ತ್ರ ಚಿಕಿತ್ಸಕರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಹಿಂದಿರುಗಿಸಿದ್ದು, ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ರೂ.30,000/-ಗಳ ಮಾಸಿಕ ವೇತನದ ಆಧಾರದ ಮೇಲೆ ಕೆಲವು ವೈದ್ಯರನ್ನು ನೇಮಿಸಿಕೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಡಾ॥ ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು, ಬೆಳಗಾಂ ಮಹಾನಗರ ಪಾಲಿಕೆಯಿಂದ ವರ್ಗಾವಣೆ ಮೇಲೆ ದಿನಾಂಕ:06/10/1988 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಪಾಲಿಕೆಯಲ್ಲಿ ಸಹಾಯಕ ಶಸ್ತ್ರಚಿಕಿತ್ಸಕರ ಹುದ್ದೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-07-2012ರ ಟಿಪ್ಪಣಿ ಹಾಗೂ ಪ್ರಸ್ಥಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಹಾಲಿ ಪಾಲಿಕೆಯಲ್ಲಿ 15 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳು ಖಾಲಿ ಇದ್ದು, ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಶಸ್ತ್ರ ಚಿಕಿತ್ಸಕರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಹಿಂತಿರುಗಿಸಿದ್ದು, ಹಾಲಿ ಗುತ್ತಿಗೆ ಆಧಾರದ ಮೇಲೆ ಕೆಲವು ವೈದ್ಯರನ್ನೂ ಸಹ ನೇಮಿಸಿಕೊಳ್ಳುತ್ತಿದ್ದು, ಇತ್ತೀಚಿಗೆ ಸಾಂಕ್ರಮಿಕ ರೋಗಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಆಸ್ಪತ್ರೆಗಳಿಗೆ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಯು ಅತ್ಯಾವಶ್ಯಕವಾಗಿರುವುದರಿಂದ ದಿನಾಂಕ:06.07.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:06-08-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-08-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:30-08-2012 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿಯೋಜನೆ ಮೇಲೆ ಬರುವ ಅಧಿಕಾರಿ ಹಾಗೂ ನೌಕರರುಗಳನ್ನು ಯಾವುದೇ ಕಾರಣಕ್ಕೂ ನಗರ ಪಾಲಿಕೆಯಲ್ಲಿ ವಿಲೀನಾತಿ ಮಾಡಬಾರದೆಂದು ನಿರ್ಣಯ ಕೈಗೊಂಡಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:30-08-2012 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿಯೋಜನೆ ಮೇಲೆ ಬರುವ ಅಧಿಕಾರಿ ಹಾಗೂ ನೌಕರರುಗಳನ್ನು ಯಾವುದೇ ಕಾರಣಕ್ಕೂ ನಗರ ಪಾಲಿಕೆಯಲ್ಲಿ ವಿಲೀನಾತಿ ಮಾಡಬಾರದೆಂದು ನಿರ್ಣಯ ಕೈಗೊಂಡಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29–09–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (247) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು ದಿನಾಂಕ:27–12–2011 ರಂದು ಮನವಿ ಸಲ್ಲಿಸಿ, ಪಾಲಿಕೆಯಲ್ಲಿ ಉಪ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಉಪ ಕಾನೂನು ಅಧಿಕಾರಿ ಹುದ್ದೆಯ ಜೊತೆಯಲ್ಲಿ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ ಪ್ರಕರಣಗಳನ್ನು ಸಹ ನಿರ್ವಹಿಸಿರುವುದಾಗಿ ತಿಳಿಸಿ, ಸದರಿ ಪ್ರಕರಣಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:13–01–2012 ರಂದು ವರದಿ ಮಂಡಿಸಿ, ಪ್ರಸ್ತುತ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳನ್ನು ನಿರ್ವಹಿಸಲು ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಒಬ್ಬರನ್ನು ನೇಮಿಸುವುದು ಅವಶ್ಯವಿರುತ್ತದೆ. ಆದ್ದರಿಂದ, ಸದರಿ ಪ್ರಕರಣಗಳ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರಿಗೆ ಅನುಭವವಿದ್ದು ಇವರ ಅರ್ಜಿಯನ್ನು ಪರಿಗಣಿಸಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಶ್ರೀ ಬಿ. ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20(ಎ)ರನ್ವಯ ಪಾಲಿಕೆಯ ವಿರುದ್ಧ ದಾಖಲಾಗುವ ಕರ್ನಾಟಕ ಲೋಕಾಯುಕ್ತ ಮತ್ತು ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸಲು, ವೇತನ ನಿಗಧಿಪಡಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28–05–2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21–08–2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (248) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಕೆ. ನಾಗರಾಜು, ನಿವೃತ್ತ ತಹಶೀಲ್ದಾರ್, ಇವರನ್ನು ಈ ಕಛೇರಿಯ ಸುತ್ತೋಲೆ ಸಂಖ್ಯೆ:ಬಿ12(1ಜಿ)ಪಿಆರ್/109/06-07, ದಿನಾಂಕ:01.06.2009ರ ಸುತ್ತೋಲೆಯನ್ವಯ ಜಂಟಿ ಆಯುಕ್ತರು (ಯಲಹಂಕ)ರವರ ಕಛೇರಿ ಆದೇಶ ಸಂಖ್ಯೆ:ಬೃ.ಬೆಂ.ಮ.ಪಾ/ಯ.ವ/ಇಎಸ್‌ಟಿ/ ಪಿಆರ್/469/09-10, ದಿನಾಂಕ:01.12.2009, ಆದೇಶದಂತೆ ಯಲಹಂಕ ವಲಯದಲ್ಲಿ 1 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ.10,000/- ಮತ್ತು ಇತರೇ ಭತ್ಯೆಗಳು ರೂ.2500/- ಸೇರಿ ಒಟ್ಟು ರೂ.12,500/- ಗೌರವಧನ ನಿಗಧಿಪಡಿಸಿ ನಿಯೋಜಿಸಿಕೊಳ್ಳಲಾಗಿರುತ್ತದೆ. ನಂತರ ಸದರಿಯವರ ಸೇವಾ ಅವಧಿಯು 1 ವರ್ಷ ಮುಗಿದ ನಂತರ ಆಯುಕ್ತರವರ ಆದೇಶದ ಮೇರೆಗೆ ದಿನಾಂಕ:01-12-2010 ರಿಂದ ದಿನಾಂಕ:31-05-2011 ರವರೆಗೆ ಅವಧಿಯನ್ನು ವಿಸ್ತರಿಸಲಾಗಿರುತ್ತದೆ.

ಮುಂದುವರೆದಂತೆ, ಜಂಟಿ ಆಯುಕ್ತರು (ಯಲಹಂಕ) ರವರ ವರದಿ ದಿನಾಂಕ:20-06-2011 ಮತ್ತು ದಿನಾಂಕ:26-4-2011ರಲ್ಲಿ ಯಲಹಂಕ ಕಛೇರಿಯ ಆಡಳಿತ್ಮಾತಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ಪರಿಶಿಷ್ಟ ಜಾತಿ ಸಮೀಕ್ಷೆಯ ಕೆಲಸ, ಕೊಳಚೆ ಪ್ರದೇಶ ಹಾಗೂ ನಿರಾಶ್ರಿತ ಪುನರ್ವಸತಿಗೆ ಸಂಬಂಧಪಟ್ಟಂತೆ ಕೆಲಸ ಕಾರ್ಯಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಸದರಿಯವರ ಸೇವೆಯನ್ನು ದಿನಾಂಕ:01.06.2011 ರಿಂದ 31.12.2011ರವರೆಗೆ ಮುಂದುವರೆಸಬೇಕೆಂದು ಹಾಗೂ ಮುಂದುವರೆಸುವ ಕುರಿತು ಕೇಂದ್ರ ಕಛೇರಿಯ ಆದೇಶವನ್ನು ನಿರೀಕ್ಷಿಸಿ ಯಲಹಂಕ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಿ, ಸದರಿಯವರ ಸೇವೆಯನ್ನು ದಿನಾಂಕ:01.06.2011 ರಿಂದ ದಿನಾಂಕ:31-12-2011 ರವರೆಗೆ ಮುಂದುವರೆಸಲು ಹಾಗೂ ಜಂಟಿ ಆಯುಕ್ತರು (ಯಲಹಂಕ) ರವರ ವರದಿ ದಿನಾಂಕ:22-07-2011ರ ವರದಿಯಲ್ಲಿ ಕೇಂದ್ರ ಕಛೇರಿಯ ಆದೇಶ ನಿರೀಕ್ಷಿಸಿ ಸದರಿಯವರನ್ನು ಮುಂದುವರೆಸಿರುವ ಸೇವಾ ಅವಧಿಯು ಸಹ ದಿನಾಂಕ:31-12-2011 ಕ್ಕೆ ಮುಕ್ತಾಯವಾಗಿರುವುದರಿಂದ, ಸದರಿ ಅವಧಿಯಲ್ಲಿ ಅಂದರೆ ಜೂನ್-2011 ರಿಂದ ಮಾರ್ಚ್-2012 ರವರೆಗೂ ಪ್ರತಿ ಮಾಹೆ ರೂ.12,500/- ರಂತೆ ಒಟ್ಟು ರೂ.1,25,000/-ಗಳ ಗೌರವಧನ ಪಾವತಿಸದೇ ಬಾಕಿಯಿದ್ದು ಹಾಗೂ ಸದರಿಯವರು ಯಲಹಂಕ ವಲಯ ವ್ಯಾಪ್ತಿಯಲ್ಲಿ 50 ಸ್ಲಂಗಳ ಉಸ್ತುವಾರಿ, ಹಾಗೂ ಚುನಾವಣಾ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದ ಉಸ್ತುವಾರಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿಯವರಿಗೆ ಪಾವತಿಸಲು ಬಾಕಿ ರೂ.1,25,000/-ಗಳನ್ನು ಮಂಜೂರು ಮಾಡಲು ಅನುಮತಿ ಹಾಗೂ ಮುಂದಿನ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ಅನುಮೋದನೆಯನ್ನು ಕೋರಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ನಾಗರಾಜು, ನಿವೃತ್ತ ತಹಶೀಲ್ದಾರ್ ರವರು ಯಲಹಂಕ ವಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದ ಅವಧಿ ದಿನಾಂಕ:01-06-2011 ರಿಂದ ದಿನಾಂಕ : 31.12.2011ರವರೆಗೆ ಮುಂದುವರೆಸಿರುವ ಬಗ್ಗೆ ಅನುಮೋದನೆ ಹಾಗೂ ಸದರಿಯವರು ಸೇವೆಯನ್ನು ಮತ್ತೊಂದು ವರ್ಷದವರೆಗೆ ವಿಸ್ತರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-08-2012ರ ನಿರ್ಣಯ.

..................2

[illegible]

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

٧

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (249) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ, ಹಿಂದಿ ಪಾಠಶಾಲೆಯಿಂದ ಸರ್ಕಾರದ ಆದೇಶದಂತೆ ಪಾಲಿಕೆಯ ಪ್ರಾಥಮಿಕ ಶಾಲೆ ಇಲ್ಲಿ ಎರವಲು ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರು ದಿನಾಂಕ:05-05-2012 ರಂದು ಮನವಿ ಸಲ್ಲಿಸಿ, ಸದರಿಯವರ ಪಾಲಿಕೆಯಲ್ಲಿನ ಎರವಲು ಸೇವಾವಧಿಯು ಒಂದು ಅಥವಾ ಎರಡು ವರ್ಷಗಳವರೆಗೆ ಮಾತ್ರ ಮುಂದುವರೆಸುತ್ತಿದ್ದು, ಇದರಿಂದ ಕೌಟುಂಬಿಕ ಜೀವನಕ್ಕೆ ತೊಂದರೆಯಾಗುತ್ತಿದೆ. ಅವರ ಪತಿ ಕರ್ನಾಟಕ ಸಚಿವಾಲಯದ ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರ ಸೇವೆಯು ವರ್ಗಾವಣೆ ರಹಿತ ಸೇವೆಯಾಗಿರುವುದರಿಂದ ಪತಿ ಪತ್ನಿಯರು ಒಟ್ಟಿಗೆ ಸೇವೆ ಸಲ್ಲಿಸಬೇಕೆಂಬ ನಿಯಮದಡಿ ಇವರ ಸೇವೆಯನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪುನರ್ ಪರಿಶೀಲಿಸಲು ಕೋರಿರುತ್ತಾರೆ.

ಶ್ರೀಮತಿ. ಆರ್.ಕೆ.ಇಂದಿರಮ್ಮ, ಹಿಂದಿ ಶಿಕ್ಷಕರು ನೃಪತುಂಗ ವಿದ್ಯಾ ಸಂಸ್ಥೆ (ರಿ) ಪ್ರಾಢಶಾಲೆ, ತುಮಕೂರು ರವರನ್ನು ಪಾಲಿಕೆಯ ಸೇವೆಗೆ ವಿಲೀನಗೊಳಿಸಲು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 1(130) ರಂತೆ ದಿನಾಂಕ:29-09-2004 ರಂದು ನಿರ್ಣಯಿಸಿರುವಂತೆ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆಯ ಸಂಖ್ಯೆ:412ಎಂಎನ್‌ವೈ/2004, ದಿನಾಂಕ:17-02-2004 ರ ರೀತ್ಯಾ ಪಾಲಿಕೆಯ ಸೇವೆಗೆ ವಿಲೀನಗೊಳಿಸಿರುವಂತೆ ಸದರಿಯವರನ್ನು ಸಹ ಪಾಲಿಕೆ ಸೇವೆಗೆ ವಿಲೀನಗೊಳಿಸಲು ಕೋರಿರುತ್ತಾರೆ.

ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗಿ, ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಸರ್ಕಾರದ ಪತ್ರದ ಸಂಖ್ಯೆ: ನಅಇ/270/ಎಂಎನ್‌ವೈ/2009 ದಿನಾಂಕ:25-07-2009 ರ ಆದೇಶದಲ್ಲಿ ಪಾಲಿಕೆಗೆ ಒಂದು ವರ್ಷದ ಅವಧಿಗೆ ನಿಯೋಜನೆ ಮೇಲೆ ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಶಿಕ್ಷಕರು ಸರ್ಕಾರದ ಆದೇಶದಂತೆ ದಿನಾಂಕ:04-02-2010ರ ಪೂರ್ವಾಹ್ನದಂತೆ ಪಾಲಿಕೆಯಲ್ಲಿ ಸಲ್ಲಿಸಿದ್ದ ಹಾಜರಾತಿ ವರದಿಯನ್ನು ಪರಿಗಣಿಸಿ, ಕಛೇರಿ ಸಮ ಸಂಖ್ಯೆ ಆದೇಶ ದಿನಾಂಕ:05-02-2010 ರಂತೆ ಕರ್ತವ್ಯದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ. ನಂತರ ಸರ್ಕಾರದ ಪತ್ರದ ಸಂಖ್ಯೆ:ನಅಇ/06/ಎಂಎನ್‌ವೈ/2011, ದಿನಾಂಕ: 07-02-2011 ರಂತೆ ಸರ್ಕಾರವು ಸದರಿ ಸಹ ಶಿಕ್ಷಕರ ನಿಯೋಜನೆ ಅವಧಿಯನ್ನು ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಅಥವಾ 2 ವರ್ಷದ ಅವಧಿಗೆ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ. ಇದರಂತೆ ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ನಿಯೋಜನಾ ಸೇವೆ ಮೇಲೆ ದಿನಾಂಕ:05-02-2011 ರಿಂದ 2 ವರ್ಷದವರೆಗೆ ಅಥವಾ ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಪಾಲಿಕೆಯ ಪ್ರಾಥಮಿಕ ಶಾಲೆ ಮಾರಪ್ಪನಪಾಳ್ಯ ಇಲ್ಲಿ ಕಾರ್ಯನಿರ್ವಹಿಸಲು ದಿನಾಂಕ:23-02-2011 ರ ಆದೇಶದಂತೆ ಮುಂದುವರೆಸಲಾಗಿದೆ.

ನಂತರ ಸಂಖ್ಯೆ: ನಅಇ/555/ಎಂಎನ್‌ವೈ/2010 ದಿನಾಂಕ:30-08-2011ರ ಸರ್ಕಾರದ ಪತ್ರದಲ್ಲಿ ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣ ವಾಸಿ ಹಿಂದೂಸ್ಥಾನ ಜನ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಬಿ.ಬಿ.ಎಂ.ಪಿ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿರುತ್ತಾರೆ.

ಈ ಸಂಬಂಧ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಸಲ್ಲಿಸಲಾಗಿದ್ದು, ದಿನಾಂಕ:28-01-2012 ರಂದು ನಡೆದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ: ಸಿಆಸುಸ್ಥಾಸ/28/2011-12ರಲ್ಲಿ ಶ್ರೀಮತಿ. ಕಲ್ಯಾಣಮ್ಮ, ಸಹ ಶಿಕ್ಷಕರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:27-02-2012 ರಂತೆ ಸರ್ಕಾರದ ಅವಗಾಹನೆಗೆ ತರಲಾಗಿದೆ.

ಪ್ರಸ್ತುತ ಪಾಲಿಕೆಯ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ 80 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರದ ಆದೇಶ ಸಂಖ್ಯೆ: ನಅಇ/139/ಎಂಎನ್‌ವೈ/2005 ದಿನಾಂಕ:04-06-2009 ರ ಪತ್ರದಲ್ಲಿ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅನುಮತಿ ನೀಡಿರುವಂತೆ, ಈಗಾಗಲೇ ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ, ಸರ್ಕಾರಿ/ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪಾಲಿಕೆಯ ಸೇವೆಗೆ ಎರವಲು ಸೇವೆ ಮೇಲೆ ನಿಯೋಜಿಸಲು/ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಪಾಲಿಕೆಯಲ್ಲಿ ಎರವಲು ಸೇವೆ ಮೇಲೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ 9 ಮಂದಿ ಅನುದಾನಿತ ಶಾಲಾ ಕಾಲೇಜು ಶಿಕ್ಷಕರು ಮತ್ತು ಉಪನ್ಯಾಸಕರು ಸದರಿಯವರುಗಳ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಕೋರಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 2203/2008 (ಎಸ್-ಆರ್‌ಇಎಸ್) ರಂತೆ ದಾವೆ ಸಲ್ಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಸದರಿ ರಿಟ್ ಪಿಟಿಷನ್ ಅನ್ನು ದಿನಾಂಕ:11-02-2011 ರಂದು ವಜಾಗೊಳಿಸಿರುವುದನ್ನು ಪರಿಗಣಿಸಿ, ಸದರಿ 9 ಮಂದಿ ಅನುದಾನಿತ ಶಾಲಾ ಕಾಲೇಜು ಶಿಕ್ಷಕರು ಮತ್ತು ಉಪನ್ಯಾಸಕರುಗಳನ್ನು ಈ ಕಛೇರಿ ಆದೇಶ ದಿನಾಂಕ:22-03-2011 ರಂತೆ ಪಾಲಿಕೆ ಸೇವೆಯಿಂದ ಬಿಡುಗಡೆ ಮಾಡಿ ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀಮತಿ. ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ, ಹಿಂದಿ ಪಾಠಶಾಲೆಯಿಂದ ಸರ್ಕಾರದ ಆದೇಶದಂತೆ ಪಾಲಿಕೆಯ ಪ್ರಾಥಮಿಕ ಶಾಲೆ ಮಾರಪ್ಪನಪಾಳ್ಯ ಇಲ್ಲಿ ಎರವಲು ಸೇವೆ ಮೇಲೆ ದಿನಾಂಕ:04-02-2010 ರಿಂದ ಕಾರ್ಯನಿರ್ವಹಿಸುತ್ತಿರುವ ಇವರು ದಿನಾಂಕ:05-05-2012 ರಂತೆ ಮನವಿಯನ್ನು ಸಲ್ಲಿಸಿ ಅವರ ಪತಿ ಕರ್ನಾಟಕ ಸಚಿವಾಲಯದ ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರ ಸೇವೆಯು ವರ್ಗಾವಣೆ ರಹಿತ ಸೇವೆಯಾಗಿರುವುದರಿಂದ ಪತಿ ಪತ್ನಿಯರು ಒಟ್ಟಿಗೆ ಸೇವೆ ಸಲ್ಲಿಸಬೇಕೆಂಬ ನಿಯಮದಡಿ ಇವರ ಸೇವೆಯನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪುನರ್ ಪರಿಶೀಲಿಸಲು ಕೋರಿರುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಜಂಟಿ ಆಯುಕ್ತರು (ಆಡಳಿತ) ರವರ ದಿನಾಂಕ:27-08-2012ರ ಟಿಪ್ಪಣಿ ಹಾಗೂ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಹಾಲಿ ಪಾಲಿಕೆಯ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ 80 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಹಾಗೂ ಪಾಲಿಕೆಯ ಶಾಲಾ ಕಾಲೇಜುಗಳು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಅನುದಾನ ಸಂಹಿತೆಗೆ ಒಳಪಟ್ಟಿರುವುದರಿಂದ ಅನುದಾನ ಸಂಹಿತೆಯ ಪರಿಚ್ಛೇದ 59 ರ ಪ್ರಕಾರ ಅನುದಾನಿತ ಶಾಲೆಗಳಿಂದ ಶಿಕ್ಷಕರುಗಳನ್ನು ಪಾಲಿಕೆ ಶಾಲೆಗಳಿಗೆ ವರ್ಗಾವಣೆ ಮಾಡಲು

..3

ಅವಕಾಶವಿರುವ ಹಿನ್ನಲೆಯ ಮೇರೆಗೆ ಈ ಹಿಂದೆ ಶ್ರೀಮತಿ. ಆರ್.ಕೆ.ಇಂದಿರಮ್ಮ, ಹಿಂದಿ ಶಿಕ್ಷಕರನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಳಿಸಿಕೊಂಡಿರುವ ರೀತ್ಯಾ ಶ್ರೀಮತಿ. ಕಲ್ಯಾಣಮ್ಮ, ಸಹ ಶಿಕ್ಷಕರನ್ನು ಸಹ ಪಾಲಿಕೆಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕೂಡಲೇ ವಿಲೀನಗೊಳಿಸುವುದು ಸಮಂಜಸವೆಂದು ಅಭಿಪ್ರಾಯಿಸುತ್ತಾ, ಜಂಟಿ ಆಯುಕ್ತರು (ಆಡಳಿತ) ರವರ ದಿನಾಂಕ:27-08-2012 ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:01-09-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:30-08-2012 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿಯೋಜನೆ ಮೇಲೆ ಬರುವ ಅಧಿಕಾರಿ ಹಾಗೂ ನೌಕರರುಗಳನ್ನು ಯಾವುದೇ ಕಾರಣಕ್ಕೂ ನಗರ ಪಾಲಿಕೆಯಲ್ಲಿ ವಿಲೀನಾತಿ ಮಾಡಬಾರದೆಂದು ನಿರ್ಣಯ ಕೈಗೊಂಡಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ದಿನಾಂಕ:30-08-2012 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿಯೋಜನೆ ಮೇಲೆ ಬರುವ ಅಧಿಕಾರಿ ಹಾಗೂ ನೌಕರರುಗಳನ್ನು ಯಾವುದೇ ಕಾರಣಕ್ಕೂ ನಗರ ಪಾಲಿಕೆಯಲ್ಲಿ ವಿಲೀನಾತಿ ಮಾಡಬಾರದೆಂದು ನಿರ್ಣಯ ಕೈಗೊಂಡಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (195) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರಿಗೆ 3 ವರ್ಷದ ಅವಧಿಗೆ ವಹಿಸಲು ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ ತಯಾರಿಸಿದ ಒಪ್ಪಂದ ಪತ್ರಕ್ಕೆ ದಿನಾಂಕ:01-08-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯ ಸಂಖ್ಯೆ:ಸಾಆಸ್ಥಾಸ/16/2011-12 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಒಪ್ಪಂದ ಪತ್ರದಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರಿಗೆ ವಹಿಸಲು, ಸದರಿ ಸಂಸ್ಥೆಗಳಿಂದ ಮುಂಗಡ ಹಣವಾಗಿ ರೂ.25,000/- ಗಳನ್ನು ಪಡೆದು ಒಪ್ಪಂದ ಮಾಡಿಕೊಳ್ಳಲು ನಿಬಂಧನೆಯನ್ನು ಅಳವಡಿಸಲಾಗಿರುತ್ತದೆ. ಈ ಮಧ್ಯೆ ಕೆಲವೊಂದು ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ವಹಿಸಲು ಮುಂದೆ ಬಂದಿರುತ್ತಾರೆ. ಆದರೆ, ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಮುಂಗಡ ಹಣವಾಗಿ ರೂ.25,000/- ಗಳನ್ನು ಪಾವತಿಸಲು ಸಾಧ್ಯವಿಲ್ಲದಿರುವುದರಿಂದ, ಸದರಿ ಮೊತ್ತವನ್ನು ಕಡಿತಗೊಳಿಸಲು ಕೋರಿರುತ್ತಾರೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರಿಗೆ ವಹಿಸಲು ಮುಂಗಡ ಹಣವಾಗಿ ರೂ.5,000/- ಗಳನ್ನು ಪಡೆದು 3 ವರ್ಷದ ಅವಧಿಗೆ ಒಪ್ಪಂದ ಮಾಡಿಕೊಳ್ಳಬಹುದಾಗಿರುತ್ತದೆ. ಇದರಿಂದ ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಹಾಗೂ ಒಂದು ವರ್ಷದಲ್ಲಿ ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಒಣ ತ್ಯಾಜ್ಯ ಕೇಂದ್ರಗಳನ್ನು ಯಾವುದೇ ದೂರುಗಳಿಲ್ಲದೇ ಸಮರ್ಪಕವಾಗಿ ನಿರ್ವಹಿಸಿದ್ದಲ್ಲಿ, ಸದರಿ ಅವಧಿಯನ್ನು ವಿಸ್ತರಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸ್ವಸಹಾಯ ಗುಂಪುಗಳು/ಚಿಂದಿ ಆಯುವವರು ರವರಿಗೆ ವಹಿಸಲು ಕೆಲ ನಿಬಂಧನೆಗಳನ್ನು ವಿಧಿಸಿ ಒಪ್ಪಂದ ಮಾಡಿಕೊಳ್ಳಲು ಕರಡು ಒಪ್ಪಂದ ಪತ್ರವನ್ನು ತಯಾರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸ್ವಸಹಾಯ ಗುಂಪುಗಳು/ಚಿಂದಿ ಆಯುವವರು ರವರಿಗೆ ವಹಿಸಲು ಬಾಲ ಕಾರ್ಮಿಕರ ನಿಯಂತ್ರಣ ಮತ್ತು ನಿಷೇಧ ಕಾಯ್ದೆ 1986 ರನ್ವಯ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಂಡು ಒಪ್ಪಂದ ಮಾಡಿಕೊಳ್ಳುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.........2

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16–07–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:16–07–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (250) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಚೇರಿ ನಿರ್ಮಾಣಕ್ಕಾಗಿ ನಿವೇಶನ ಕ್ರಯಕ್ಕೆ ನೀಡಲು ಪಾಲಿಕೆಯ ಸ್ಥಾಯಿ ಸಮಿತಿಗಳು ಹಾಗೂ ದಿನಾಂಕ:28-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 14(238)/2011-12ರ ನಿರ್ಣಯದ ಅನುಸಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ 10512.5 ಚದರಡಿಗಳನ್ನು ರೂ.3,31,14,375/- ಗಳನ್ನು ನಿಗಧಿಪಡಿಸಿ, ಅವರಿಗೆ ಕ್ರಯಕ್ಕೆ ನೀಡಲು ಸರ್ಕಾರದ ಅನುಮೋದನೆಯನ್ನು ನೀಡುವಂತೆ ದಿನಾಂಕ: 16-05-2012 ರ ಪತ್ರದಲ್ಲಿ ಕೋರಲಾಗಿತ್ತು.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ ಪ್ರದೇಶಗಳಲ್ಲಿನ ಡಿ.ದೇವರಾಜು ಅರಸು ಭವನಕ್ಕೆ ಲಗತ್ತಾಗಿರುವ 10512.5 ಚದರಡಿಗಳ ನಿವೇಶನವನ್ನು ರೂ.3,31,14,375/- ಗಳಿಗೆ (ರೂ.ಮೂರು ಕೋಟಿ ಮೂವತ್ತೊಂದು ಲಕ್ಷದ ಹದಿನಾಲ್ಕು ಸಾವಿರದ ಮುನ್ನೂರ ಎಪ್ಪತ್ತೈದು ಮಾತ್ರ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಕ್ರಯಕ್ಕೆ ನೀಡಲು ದಿನಾಂಕ:28-03-2012 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ:14(238)/11-12 ರಲ್ಲಿ ತೆಗೆದುಕೊಂಡಿರುವ ನಿರ್ಣಯಕ್ಕೆ ಸರ್ಕಾರವು ದಿನಾಂಕ:28-08-2012 ರ ಆದೇಶದಂತೆ ಅನುಮೋದನೆ ನೀಡಿರುತ್ತದೆ. ಸದರಿ ಸರ್ಕಾರದ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ದಾಖಲಾತಿಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:06-09-2012 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:06-09-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:06-09-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (251) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಬಾಡಿಗೆ ಆಧಾರದ ಮೇಲೆ "ಎಲೆಕ್ಟ್ರಾನಿಕ್ ಡಿಸ್‌ಪ್ಲೇ ಸಿಸ್ಟಂ' ಗಳನ್ನು ಅಳವಡಿಸುವ ಕುರಿತು ಟೆಂಡರ್ ಅಧಿಸೂಚನೆಯನ್ನು ಸಂಖ್ಯೆ: ಸಆ(ಜಾ)ಪಿಆರ್/12/07-08 ದಿನಾಂಕ:06.12.2007 ರಂತೆ ಪ್ರಕಟಿಸಲಾಗಿತ್ತು. ಈ ಪ್ರಕಟಣೆಗೆ ಪ್ರತಿಕ್ರಿಯಿಸಿ ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಮತ್ತು ಇತರರು ತಮ್ಮ ಟೆಕ್ನಿಕಲ್ ಬಿಡ್‌ನ್ನು ಸಲ್ಲಿಸಿದ್ದರು. ಒಟ್ಟು 8 ಸಂಸ್ಥೆಗಳು ಟೆಕ್ನಿಕಲ್ ಬಿಡ್‌ನಲ್ಲಿ ಸಫಲರಾಗಿ ಟೆಂಡರ್-ಕಂ-ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಯಿತು. ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಸಂಸ್ಥೆಗಳ ಬಿಡ್ ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl No. | Agency | Bid Amount |
|---|---|---|
| 1. | M/s Sujay Advertisers | 2.3 Crores |
| 2. | M/s VSR Media | 20.01 Crores |
| 3. | M/s Times Innovative Media | 44.75 Lakhs |
| 4. | M/s Hype Intergrated | 12.26 Crores |
| 5. | M/s Star Advertising | 3.49 Crores |
| 6. | M/s Prakash Arts | 2.16 Crores |
| 7. | M/s Omni Egate | 1.20 Crores |
| 8. | M/s Ad Labs Films Ltd. | 25.02 Crores |

ದಿನಾಂಕ:04.01.2008 ರಲ್ಲಿ ನಡೆದ ಟೆಂಡರ್-ಕಂ-ಹರಾಜು ಪ್ರಕ್ರಿಯೆಯಲ್ಲಿ ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಇವರು ಅತಿ ಹೆಚ್ಚಿನ ದರ ನಮೂದಿಸಿದ್ದರ ಮೇರೆಗೆ ಅವರನ್ನು ಯಶಸ್ವಿ ಬಿಡ್‌ದಾರರೆಂದು ಘೋಷಿಸಿದ್ದು, ಅವರಿಂದ ನಿಗದಿತ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಳ್ಳಲಾಗಿರುತ್ತದೆ. ಟೆಂಡರ್ ನಿಯಮಾನುಸಾರ ಕರಾರು ಪತ್ರವನ್ನು ಪಾಲಿಕೆಯೊಂದಿಗೆ ಸಹಿ ಮಾಡಿಕೊಳ್ಳಲು ಸದರಿ ಸಂಸ್ಥೆಯವರಿಗೆ ಈ ಕಛೇರಿಯಿಂದ ದಿನಾಂಕ:27.06.2008, 16.10.2008 ಮತ್ತು 13.11.2008 ರಂದು ಪತ್ರಗಳನ್ನು ಕಳುಹಿಸಲಾಗಿದ್ದು, ಆದರೆ ಸದರಿ ಸಂಸ್ಥೆಯವರು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಬದಲಾಗಿ ದಿನಾಂಕ:01.11.2008 ಮತ್ತು 18.11.2008 ರಂದು ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿ., (ಮೆ॥ ರಿಲಯನ್ಸ್ ಮೀಡಿಯಾ ವರ್ಲ್ಡ್ ಲಿ.,) ಪಾಲಿಕೆಗೆ ಪತ್ರಗಳನ್ನು ಬರೆದು ಕರಾರು ಪತ್ರವನ್ನು ಮಾಡಿಕೊಳ್ಳದಿರಲು ಹಲವಾರು ಆಕ್ಷೇಪಣೆಗಳು ಹಾಗೂ ಸಮಸ್ಯೆಗಳನ್ನು ಸಲ್ಲಿಸಿರುತ್ತಾರೆ. ಈ ಆಕ್ಷೇಪಣೆಗಳಿಗೆ ಪಾಲಿಕೆ ವತಿಯಿಂದ ಸೂಕ್ತ ವಿವರಣೆಯನ್ನು ಕಳುಹಿಸಿಕೊಡಲಾಗಿರುತ್ತದೆ.

ಮುಂದುವರೆದು, ಸದರಿ ಸಂಸ್ಥೆಯವರಿಗೆ ಪಾಲಿಕೆಯ ವತಿಯಿಂದ ಅಂತಿಮ ನೋಟಿಸ್ ನೀಡಿ ಕರಾರು ಪತ್ರ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಈಗಾಗಲೇ ಪಾವತಿಸಿರುವ (ಲೈಸನ್ಸ್ ಫೀ) ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ರೂ.28,31,24,720/- (ಇಪ್ಪತ್ತೆಂಟು ಕೋಟಿ ಮೂವತ್ತೊಂದು ಲಕ್ಷ ಇಪ್ಪತ್ನಾಲ್ಕು ಸಾವಿರದ ಏಳನೂರಾ ಇಪ್ಪತ್ತು ರೂಗಳು ಮಾತ್ರ) ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಸೂಚಿಸಲಾಗಿರುತ್ತದೆ.

ಈ ಸಂಬಂಧ ಸದರಿ ಸಂಸ್ಥೆಯವರು ಪ್ರತ್ಯುತ್ತರವಾಗಿ ಇಂತಹ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ಟೆಂಡರ್ ಪ್ರಕಾರ ಕೆಲಸ ನಿರ್ವಹಣೆ ಸಾಧ್ಯವಿಲ್ಲವೆಂದು ತಿಳಿಸುತ್ತಾ ಪಾಲಿಕೆಯೇ ಎಲ್ಲಾ ವಿಳಂಬಗಳಿಗೆ ಕಾರಣವೆಂದು ಹಾಗೂ

ಈ ಸನ್ನಿವೇಶದಲ್ಲಿ ಏಜೆನ್ಸಿಯು ಪಾಲಿಕೆಗೆ ಪಾವತಿಸಿರುವ (ಲೈಸನ್ಸ್ ಫೀ) ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ರೂ.28,31,24,720/- (ಇಪ್ಪತ್ತೆಂಟು ಕೋಟಿ ಮೂವತ್ತೊಂದು ಲಕ್ಷ ಇಪ್ಪತ್ನಾಲ್ಕು ಸಾವಿರದ ಏಳನೂರಾ ಇಪ್ಪತ್ತು ರೂಗಳು ಮಾತ್ರ) ಮೊತ್ತವನ್ನು ಏಳು ದಿನಗಳೊಳಗೆ ಮರುಪಾವತಿಸುವಂತೆ ದಿನಾಂಕ:15.05.2009 ರ ಪತ್ರದಲ್ಲಿ ಕೋರಿರುತ್ತಾರೆ. ಈ ಸಂಬಂಧ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:25.11.2009ರಂದು ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಿದ ಸಭೆಯಲ್ಲಿ ಸದರಿ ಸಂಸ್ಥೆಯವರನ್ನು ಪಾಲ್ಗೊಳ್ಳಲು ಸೂಚಿಸಲಾಗಿತ್ತು.

ದಿನಾಂಕ:18.02.2010 ರಂದು ನಡೆದ ಸಭೆಯಲ್ಲಿ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದು ಎಲ್ಲಾ ವಿಷಯಗಳನ್ನು ಚರ್ಚಿಸಲಾಯಿತು. ಏಜೆನ್ಸಿಯು 2008ರಲ್ಲಿ ಗುತ್ತಿಗೆ ಕರಾರು ಪತ್ರವನ್ನು ಸಹಿ ಮಾಡದ ಪ್ರಯುಕ್ತ ಪಾಲಿಕೆಗೆ ಪ್ರತಿ ವರ್ಷಕ್ಕೆ ರೂ.25.02 ಕೋಟಿ ನಷ್ಟ ಉಂಟಾಗಿದ್ದು, ಏಜೆನ್ಸಿಯು ಪಾವತಿಸಿದ್ದ ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಲಾಗಿರುವಂತೆ ಈ ಕಛೇರಿಯ ಆದೇಶ ಸಂಖ್ಯೆ:ಜಅ(ಜಾ)/ಪಿಆರ್/82/07-08 ರಂತೆ ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿಮಿಟೆಡ್ (ಮೆ॥ ರಿಲೆಯನ್ಸ್ ಮೀಡಿಯಾ ವರ್ಲ್ಡ್ ಲಿಮಿಟೆಡ್) ಸಂಸ್ಥೆಯವರು ಪಾಲಿಕೆಯ ಸ್ವತ್ತುಗಳಲ್ಲಿ 7 ಸಂಖ್ಯೆಯ LED ಫಲಕಗಳನ್ನು ಬಾಡಿಗೆ ಆಧಾರದ ಮೇಲೆ ಅಳವಡಿಸಲು ಕರೆದಿದ್ದ ಟೆಂಡರ್-ಕಂ-ಹರಾಜಿನಲ್ಲಿ ಭಾಗವಹಿಸಿ ಕರಾರು ಪತ್ರವನ್ನು ಮಾಡಿಕೊಳ್ಳದೇ ಯೋಜನೆಯನ್ನು ಜಾರಿ ಮಾಡಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಸ್ವತ್ತುಗಳಲ್ಲಿ 7 ಸಂಖ್ಯೆಯ LED ಫಲಕಗಳನ್ನು ಬಾಡಿಗೆ ಆಧಾರದ ಮೇಲೆ ಅಳವಡಿಸಲು ಕರೆದಿದ್ದು ಟೆಂಡರ್-ಕಂ-ಹರಾಜು ಪ್ರಕಟಣೆಯನ್ನು ರದ್ದುಪಡಿಸಲಾಗಿದ್ದು ಹಾಗೂ ಭದ್ರತಾ ಠೇವಣಿ ಇಟ್ಟಿರುವ ಹಣವನ್ನು ಮತ್ತು ಪಾವತಿಸಿರುವ ಪರವಾನಗಿ ಶುಲ್ಕವನ್ನು ನಗರ ಪಾಲಿಕೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿ., ರವರು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಈ ಬಗ್ಗೆ ಮನವಿಯನ್ನು ಸಲ್ಲಿಸಿ ಪಾಲಿಕೆಯು ಮುಟ್ಟುಗೋಲು ಹಾಕಿಕೊಂಡಿರುವ ಲೈಸೆನ್ಸ್ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತವನ್ನು ಮರುಪಾವತಿ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ:19.04.2010ರಲ್ಲಿ ಸರ್ಕಾರವು ಸದರಿ ಪ್ರಕರಣದ ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುವ ಮೇರೆಗೆ ದಿನಾಂಕ:07.05.2010ರಂದು ಸಂಬಂಧಪಟ್ಟ ಮೂಲ ಕಡತವನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ:ನಅಇ 369 ಎಂಎನ್‌ವೈ 2010, ದಿನಾಂಕ: 01.07.2010ರ ಆದೇಶದ ಮೇರೆಗೆ ಸದರಿ ಸಂಸ್ಥೆಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ಭದ್ರತಾ ಠೇವಣಿ ಹಣ ಮತ್ತು ಪರವಾನಗಿ ಶುಲ್ಕವನ್ನು ಕೂಡಲೇ ಸಂಸ್ಥೆಗೆ ವಾಪಸ್ಸು ಮಾಡುವಂತೆ ಆದೇಶಿಸಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ:01.07.2010ರಂದು ನೀಡಿರುವ ನಿರ್ದೇಶನವನ್ನು ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಮರು ಪರಿಶೀಲಿಸುವಂತೆ ಕೋರಲಾಗಿರುತ್ತದೆ.

1. ಟೆಂಡರ್ ಅಧಿಸೂಚನೆ Clause 9 (Appendix A) ಮೇರೆಗೆ ಟೆಂಡರಿನಲ್ಲಿ LED ಜಾಹೀರಾತುಗಳನ್ನು ಅಳವಡಿಸುವ ಸ್ವತ್ತುಗಳನ್ನು ಪರಮಾರ್ಶಿಸಿ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ತದನಂತರ ಬಿಡ್ಡುಗಳನ್ನು ಸಲ್ಲಿಸಬೇಕೆಂದು ತಿಳಿಸಲಾಗಿದೆ. ಟೆಂಡರ್ ಪ್ರಕಟಣೆ ದಿನಾಂಕದಿಂದ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ದಿನಾಂಕದವರೆವಿಗೂ ಒಂದು ತಿಂಗಳ ಕಾಲಾವಕಾಶ ಇದ್ದರಿಂದ ಏಜೆನ್ಸಿಯವರು ಈ ಸ್ಥಳಗಳಲ್ಲಿ ಜಾಹೀರಾತುಗಳನ್ನು ಅಳವಡಿಸುವ ನಿಟ್ಟಿನಲ್ಲಿ ಆಗಬಹುದಾದ ಸಾಧಕಬಾಧಕಗಳನ್ನು ಮನಗಂಡೇ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರೆಂದು ಭಾವಿಸಬೇಕಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಾಹೀರಾತುಗಳನ್ನು ಅಳವಡಿಸಲು ಈ ಸ್ಥಳಗಳು ಆರ್ಥಿಕ ದೃಷ್ಟಿಯಿಂದ ಸರಿಯಿರುವುದಿಲ್ಲವೆಂಬ ಏಜೆನ್ಸಿಯ ವಾದವನ್ನು ಒಪ್ಪಲಾಗುವುದಿಲ್ಲ.

..................3

2. Clause 13 (Appendix A) ಮೇರೆಗೆ ಪಾಲಿಕೆಯು ಬಿಡ್ಡನ್ನು ಒಪ್ಪಿದ ಕೂಡಲೇ ಅಂತಹ ಏಜೆನ್ಸಿಯು ಜಾಹೀರಾತು ಅಳವಡಿಕೆ ಬಗ್ಗೆ ಕರಾರನ್ನು ಸಹಿ ಮಾಡುವ ನಿಬಂಧನೆ ಇರುತ್ತದೆ. ಆದರೆ, ಈ ಪ್ರಕರಣದಲ್ಲಿ 27.06.2008ರಂದು ಸದರಿ ಏಜೆನ್ಸಿಯ ಬಿಡ್ಡನ್ನು ಒಪ್ಪಿಕೊಳ್ಳಲಾಗಿದೆಯೆಂದು ಹಾಗೂ ಈ ಬಗ್ಗೆ ಕರಾರರನ್ನು ಮಾಡಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಏಜೆನ್ಸಿಗೆ ಪಾಲಿಕೆ ವತಿಯಿಂದ ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ. ತದನಂತರವೂ ಸಹ ಏಜೆನ್ಸಿಗೆ ಕರಾರು ಪತ್ರವನ್ನು ಮಾಡಿಕೊಳ್ಳುವ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡಲಾಗಿದೆ.

3. Clause 14 (Appendix A) ಮೇರೆಗೆ ಟೆಂಡರುದಾರರು ಒಪ್ಪಿಗೆ ಪತ್ರ ಪಡೆದ 15 ದಿನಗಳೊಳಗೆ ಪೂರ್ಣ ಬಿಡ್ಡು ಮೊತ್ತವನ್ನು ಏಜೆನ್ಸಿ ಪಾವತಿಸಬೇಕಿರುತ್ತದೆ ಹಾಗೂ ಈ ಬಗ್ಗೆ ಕರಾರನ್ನು ಸಹ ಸಹಿ ಮಾಡಬೇಕಿರುತ್ತದೆ. ಈ ಪ್ರಕರಣದಲ್ಲಿ ಟೆಂಡರುದಾರರು ಹಣವನ್ನು ಪಾವತಿಸಿರುತ್ತಾರೆ. ಆದರೆ ಕರಾರನ್ನು ಸಹಿ ಮಾಡಲು ವಿಳಂಬ ಮಾಡಿರುವುದು ಏಜೆನ್ಸಿಯ ವತಿಯಿಂದಲೇ ಹೊರತು ಪಾಲಿಕೆಯ ವತಿಯಿಂದಲ್ಲ. ಆದ್ದರಿಂದ ಕರಾರನ್ನು ಸಹಿ ಮಾಡದೇ ಇರುವ ಜವಾಬ್ದಾರಿಯನ್ನು ಪಾಲಿಕೆಯ ಮೇಲೆ ಹೊರಸುವುದು ಯಾವುದೇ ದೃಷ್ಟಿಕೋನದಿಂದಲೂ ಸರಿಯೆಂದು ಕಂಡು ಬರುವುದಿಲ್ಲ.

4. Clause 15 (Appendix A) ಪ್ರಕಾರ ಬಿಡ್ಡುದಾರರು ಕರಾರನ್ನು ಸಹಿ ಮಾಡಿ 15 ದಿನಗಳೊಳಗಾಗಿ ಜಾಹೀರಾತುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಇಲ್ಲದಿದ್ದ ಪಕ್ಷದಲ್ಲಿ ಕರಾರನ್ನು ಉಲ್ಲಂಘಿಸಿದಂತೆ ಪರಿಗಣಿಸಿ ಟೆಂಡರುದಾರರು ಪಾವತಿಸಿರುವ ಸೆಕ್ಯೂರಿಟಿ ಡಿಪಾಸಿಟ್ ಮತ್ತು ಬಿಡ್ಡು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂಥೆ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ಒಪ್ಪಿಗೆ ಪತ್ರವನ್ನು ದಿನಾಂಕ:27.06.2008ರಂದು ನೀಡಿ ಏಜೆನ್ಸಿಯು ಟೆಂಡರ್ ಷರತ್ತುಗಳನ್ನು ಸುಮಾರು ಎರಡು ವರ್ಷ ಅವಧಿ ಕಳೆದರೂ ಸಹ ಪಾಲಿಸದಿದ್ದ ಕಾರಣ ಇ.ಎಂ.ಡಿ. ಮತ್ತು ಲೈಸೆನ್ಸ್ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

5. ಟೆಂಡರ್ ಷರತ್ತುಗಳು ಕರಾರಿನ ಅವಿಭಾಜ್ಯ ಅಂಗವಾಗಿರುವುದರಿಂದ ಹಾಗೂ ಟೆಂಡರ್ ಷರತ್ತುಗಳನ್ನು ಸಂಪೂರ್ಣವಾಗಿ ಏಜೆನ್ಸಿಯು ಉಲ್ಲಂಘಿಸಿರುವುದರಿಂದ ಲೈಸೆನ್ಸ್ ಫೀ ಮತ್ತು ಇ.ಎಂ.ಡಿ. ಮೊತ್ತವನ್ನು ಪಾಲಿಕೆ ಮುಟ್ಟುಗೋಲು ಹಾಕಿಕೊಂಡಿರುವುದು ಸರಿಯಿರುತ್ತದೆ. ಕರಾರನ್ನು ಸಹಿ ಮಾಡಿಲ್ಲವೆಂಬ ಏಕೈಕ ಕಾರಣಕ್ಕೆ ಈ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವುದು ಸರಿಯಿಲ್ಲವೆಂಬ ನಿರ್ಧಾರಕ್ಕೆ ಬರುವುದು ಸರಿಯಿರುವುದಿಲ್ಲ.

6. ಈ ಪ್ರಕರಣದ ಎಲ್ಲಾ ಆಗುಹೋಗುಗಳನ್ನು ಸಮಗ್ರವಾಗಿ ಪರಿಶೀಲಿಸಿ ನಿರ್ಧಾರಕ್ಕೆ ಬರುವುದು ಸರಿಯಾದ ಮಾರ್ಗವೆನಿಸುತ್ತದೆ. ಏಜೆನ್ಸಿಗೆ ಪಾಲಿಕೆ ವತಿಯಿಂದ ಒಪ್ಪಿಗೆ ಪತ್ರ ನೀಡಿ ಎರಡು ವರ್ಷ ಕಳೆದಿರುವುದರಿಂದ ಏಜೆನ್ಸಿಯು ಎರಡು ವರ್ಷದ ಲೈಸೆನ್ಸ್ ಫೀ ಅಂದರೆ ರೂ.50.04 ಕೋಟಿ ಮೊತ್ತವನ್ನು ನಿಯಮಾನುಸಾರ ಪಾಲಿಕೆಗೆ ಸಂದಾಯ ಮಾಡಬೇಕಿರುತ್ತದೆ.

7. ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಇವರು ಅತಿ ಹೆಚ್ಚಿನ ಮೊತ್ತವನ್ನು ಬಿಡ್‌ನಲ್ಲಿ ನಮೂದಿಸಿದ್ದು, (H1) ಬಿಡ್ಡುದಾರರಾಗಿರುತ್ತದೆ. ಇವರ ನಂತರದ ಎರಡನೇ ಅತಿ ಹೆಚ್ಚಿನ ಬಿಡ್ಡುದಾರರಾದ (H2) M/s. VSR Media ಇವರಿಗೆ ಟೆಂಡರನ್ನು ವಹಿಸಿಕೊಟ್ಟಿದ್ದಲ್ಲಿ ಪಾಲಿಕೆಗೆ ಎರಡು ವರ್ಷಕ್ಕೆ ರೂ.40.02 ಕೋಟಿ ಸಂದಾಯ ವೃದ್ಧಿಯಾಗುತ್ತಿತ್ತು.

ಈ ಎಲ್ಲಾ ಅಂಶಗಳನ್ನು ಹಾಗೂ ಈ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ದಿನಾಂಕ:20.07.2010ರಂದು ಸರ್ಕಾರಕ್ಕೆ ಮತ್ತೊಮ್ಮೆ ಕಳುಹಿಸಿದ್ದು, ವಾಸ್ತವಾಂಶವನ್ನು ಸರ್ಕಾರದ ಗಮನಕ್ಕೆ ತಂದು ಪಾಲಿಕೆಯ ನಿಲುವನ್ನು ಎತ್ತಿಹಿಡಿಯುವಂತೆ ಕೋರಲಾಗಿರುತ್ತದೆ.

ಆದರೆ, ಮೆ॥ ಆಡ್ ಲ್ಯಾಬ್ಸ್ ಸಂಸ್ಥೆಯವರು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ರವರಿಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿದ್ದು, ಈ ಮೇಲ್ಮನವಿಗೆ ಸರ್ಕಾರವು ದಿನಾಂಕ:04.12.2010, 10.01.2011, 07.02.2011, 15.07.2011, 05.09.2011 29.06.2012ರಂದು ವಿಚಾರಣೆಗಳನ್ನು ನಡೆಸಲಾಗಿರುತ್ತದೆ ಹಾಗೂ ಪಾಲಿಕೆ ಪರವಾಗಿ ಸದರಿ ಪ್ರಕರಣದ ಸಂಕ್ಷಿಪ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುವ ಮೇರೆಗೆ ದಿನಾಂಕ:09.07.2012ರಂದು ಸಲ್ಲಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಮೇಲ್ಮನವಿ/ಮರು ಪರಿಶೀಲನೆ ಮೆ॥ ಆಡ್‌ಲ್ಯಾಬ್ಸ್ ಪ್ರೈ.ಲಿ. (ಮೆ॥ ರಿಲಯನ್ಸ್ ಮೀಡಿಯಾ ವರ್ಲ್ಡ್ ಲಿಮಿಟೆಡ್) ಹಾಗೂ ಪಾಲಿಕೆ ವಿರುದ್ಧ ಕೆ.ಎಂ.ಸಿ. ಕಾಯ್ದೆ 1976 ಸೆಕ್ಷನ್ 102 ಅಡಿಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

<u>Government Order No: UDD 369 MNY 2010, dated:07.08.2012</u>

For the reasons mentioned in the above paras, the appeal/Revision Petition filed by M/s. Adlabs Films Limited (Reliance Media World Limited) is allowed and the Order No.JC(A)PR/82/07-08, dated: 18.02.2010 of the Addl. Commissioner (Admn), BBMP., is hereby set aside. Further, the B.B.M.P. is directed to implement the directions issued vide Government letter No.UDD 369 MNY 2010, dated:01.07.2010 and refund the forfeited amount to M/s. Adlabs Films Limited (Reliance Media World Limited).

ಈ ವಿಷಯವನ್ನು ಪರಿಶೀಲಿಸಿ, ಪಾಲಿಕೆ ಕೈಗೊಳ್ಳಬೇಕಿರುವ ಕ್ರಮದ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಪಡೆಯಲಾಗಿ ಕಾನೂನು ಕೋಶವು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

Having regard to the totality of the case and huge stakes involved, we left with no option expect moving the State Government by way review petition with request to recall the order dated:07-08-2012 and give a full pledged opportunity (with the assistance of a Legal Expert). The entire matter may have to be reargued before the government including the question in relation to jurisdiction (ILR 1999 Karnataka 314).

In view of the heavy reliance placed by the government on the opinion of the learned Advocate General, It is very much necessary for the BBMP to seek a fresh legal opinion after apprising the learned Advocate General about extraordinary circumstances under which the BBMP passed the forfeiture order.

ಮೇಲ್ಕಂಡ ಎಲ್ಲಾ ಅಂಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:18-09-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸರ್ಕಾರದ ಅಭಿಪ್ರಾಯದಂತೆ ಮುಂದಿನ ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಸರ್ಕಾರದ ಅಭಿಪ್ರಾಯದಂತೆ ಮುಂದಿನ ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (121) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಗ್ರೀನ್ ಸಿಟಿ ಮಾರ್ಕೆಟಿಂಗ್ ಬೆಂಗಳೂರು ರವರು ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಬುಲೇವಾರ್ಡ್, ಟ್ರಾಫಿಕ್ ಐಲ್ಯಾಂಡ್ ಮತ್ತು ಮೀಡಿಯನ್‌ಗಳನ್ನು ಸ್ವಂತ ಬಂಡವಾಳದ ಮೂಲಕ ದತ್ತಿನ ಆಧಾರದ ಮೇಲೆ ಸುಂದರೀಕರಣಗೊಳಿಸಿ ನಿರ್ವಹಣೆ ಮಾಡಲು ಮೂರು ವರ್ಷಗಳ ಅವಧಿಗೆ ಅನುಮತಿ ನೀಡುವಂತೆ ಕೋರಿ ಜಾಹೀರಾತು ತೆರಿಗೆಯನ್ನು ಭರಿಸಲು ಒಪ್ಪಿ ದಿನಾಂಕ: 05-03-2012ರಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

1. ಮಹಾತ್ಮಗಾಂಧಿ ರಸ್ತೆಯ ಪೊಲೀಸ್ ವೈರ್‌ಲೆಸ್ ಸ್ಟೇಷನ್ ಕಾಂಪೌಂಡ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗಿನ ಬುಲೇವಾರ್ಡ್
2. ಕೆ.ಆರ್.ರಸ್ತೆಯ ಟ್ರಾಫಿಕ್ ಐಲ್ಯಾಂಡ್ ಮತ್ತು ಸದರಿ ಪ್ರದೇಶದಿಂದ ನೃಪತುಂಗ ರಸ್ತೆವರೆಗಿನ ಅಂಡರ್‌ಪಾಸ್ ಮೇಲ್ಭಾಗದ ಸಣ್ಣ ಉದ್ಯಾನವನ (Strip Garden)
3. ಬ್ರಿಗೇಡ್ ರಸ್ತೆ ಮತ್ತು ರೆಸಿಡೆನ್ಸಿ ರಸ್ತೆಯ ಜಂಕ್ಷನ್ ಬಳಿಯ ಟ್ರಾಫಿಕ್ ಐಲ್ಯಾಂಡ್
4. ದೊಮ್ಮಲೂರುನಿಂದ ಹೆಚ್.ಎ.ಎಲ್. ವರೆಗಿನ ಹಳೇ ಏರ್‌ಪೋರ್ಟ್ ರಸ್ತೆಯವರೆಗಿನ ಮೀಡಿಯನ್
5. ಸ್ವಾಮಿ ವಿವೇಕಾನಂದ ರಸ್ತೆಯ ಕಾಮಧೇನು ಹೋಟೆಲ್ ಕಾಂಪೌಂಡ್ ಬದಿಯಲ್ಲಿನ ಸಣ್ಣ ಉದ್ಯಾನವನ (Strip Garden)
6. ರೇಸ್‌ಕೋರ್ಸ್ ರಸ್ತೆಯ ಜಂಕ್ಷನ್ ಬಳಿಯ ಟ್ರಾಫಿಕ್ ಐಲ್ಯಾಂಡ್

ಆದರೆ, ದಿನಾಂಕ:27-02-2012 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯ ಸಂಖ್ಯೆ:ತೆಆಸ್ಥಾಸ/483/11-12 ರಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ.

"ಪಾಲಿಕೆಯಿಂದ ನಿರ್ಮಿಸಿರುವ ವೃತ್ತ, ರಸ್ತೆ ವಿಭಜಕ, ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಾಂಡ್‌ಗಳನ್ನು ಪಾಲಿಕೆಯಿಂದಲೇ ನಿರ್ವಹಣೆ ಮಾಡಲಾಗುತ್ತಿದ್ದು, ಮೇಲ್ಕಂಡ ಖಾಸಗಿ ಸಂಸ್ಥೆಗಳು ನಿರ್ವಹಣೆ ನೆಪದಲ್ಲಿ ಪಾಲಿಕೆಗೆ ಯಾವುದೇ ಆದಾಯವಿಲ್ಲದೆ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಿರುವುದು ವ್ಯವಸ್ಥಿತವಾದ ಸಂಚಾಗಿದ್ದು, ಖಾಸಗಿಯವರಿಗೆ ಆದಾಯ ಮಾಡಿಕೊಡುವ ಹುನ್ನಾರವಾಗಿರುತ್ತದೆ. ಅಲ್ಲದೇ ಪಾರದರ್ಶಕ ಕಾಯ್ದೆ ಉಲ್ಲಂಘಿಸಿ ಒಂದು ಸಂಸ್ಥೆಗೆ ಜಾಹೀರಾತಿಗೆ ಅನುಮತಿ ನೀಡಿರುವುದು ಹಾಗೂ ಪಾಲಿಕೆಗೆ ನೆಲಬಾಡಿಗೆ, ಜಾಹೀರಾತು ಶುಲ್ಕ ನಷ್ಟ ಮಾಡಿ ಅನುಮತಿ ನೀಡಿರುವುದು ಕಂಡು ಬಂದಿರುತ್ತದೆ. ಆದುದರಿಂದ ಪೂರ್ವ ವಲಯದಲ್ಲಿ ವೃತ್ತ, ರಸ್ತೆ ವಿಭಜಕ, ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಾಂಡ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ದತ್ತಿನ ಆಧಾರದ ಮೇಲೆ ಖಾಸಗಿ ಸಂಸ್ಥೆಗಳಿಗೆ ನಿರ್ವಹಣೆ ಆಧಾರದ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಿರುವ ಆದೇಶವನ್ನು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕೂಡಲೇ ರದ್ದುಪಡಿಸುವುದು ಹಾಗೂ ಈ ಮೇಲ್ಕಂಡ ಪಟ್ಟಿಯಲ್ಲಿರುವ ಸ್ಥಳಗಳು ಮಾತ್ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಗಮನಕ್ಕೆ ಬಂದಿದ್ದು, ಇದೇ ರೀತಿ ಬೇರೆ ಪ್ರಕರಣಗಳಿದ್ದಲ್ಲಿ ಅವುಗಳನ್ನು ಸಹ ರದ್ದುಗೊಳಿಸಿ ಹೊಸದಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್-ಕಂ-ಹರಾಜುಗಳನ್ನು ಆಹ್ವಾನಿಸಿ, ನಿರ್ವಹಣೆ ಮತ್ತು ಜಾಹೀರಾತು ಪ್ರದರ್ಶನಕ್ಕೆ ನೆಲಬಾಡಿಗೆ, ಜಾರಿಯಲ್ಲಿರುವ ಜಾಹೀರಾತು ಶುಲ್ಕ ಮತ್ತು ಸೇವಾ ತೆರಿಗೆ ಪಾವತಿಸುವಂತೆ ಕ್ರಮಕೈಗೊಳ್ಳುವುದೆಂದು ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ".

ಮೇಲ್ಕಂಡ ಸ್ಥಳಗಳಿಗೆ ಸಂಬಂಧಪಟ್ಟ ನಿರ್ವಹಣೆಯ ಕಡತವನ್ನು ಸಮಿತಿಯು ಪರಿಶೀಲಿಸಲು ಇಚ್ಛಿಸಿರುವುದರಿಂದ ಸಂಬಂಧಪಟ್ಟ ಮೂಲ ಕಡತವು ಜಂಟಿ ಆಯುಕ್ತರು (ಜಾಹೀರಾತು) ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರು ಕಳುಹಿಸಿರುವ ಕಡತದೊಂದಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮುಂದಿನ ಸೂಕ್ತ ಕ್ರಮಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಅದರಂತೆ, ದಿನಾಂಕ:17-04-2012 ರಂದು ನಡೆದ ತೋಟಗಾರಿಕೆ ಸ್ಥಾಯಿ ಸಮಿತಿ ಸಭೆಯಲ್ಲಿ ವಿಷಯದ ಸಂಖ್ಯೆ:ತೊಸ್ಥಾಸ/07/12-13 ರಂತೆ "ಮೆ॥ ಗ್ರೀನ್ ಸಿಟಿ ಮಾರ್ಕೆಟಿಂಗ್‌ರವರು ದಿನಾಂಕ:17-10-2011 ರಿಂದ ಕೆಲವು ಮೀಡಿಯನ್ ಮತ್ತು ಸರ್ಕಲ್‌ಗಳನ್ನು ನಿರ್ವಹಣೆ ಮಾಡಲು 11 ತಿಂಗಳ ಅವಧಿಗೆ ಗುತ್ತಿಗೆ ನೀಡಿರುತ್ತಾರೆ. ಈ ಆಧಾರದ ಮೇಲೆ ಸದರಿಯವರು ಸುಮಾರು ಲಕ್ಷಾಂತರ ರೂಪಾಯಿಗಳನ್ನು ನಿರ್ವಹಣೆಗೆ ವೆಚ್ಚ ಮಾಡಿದ್ದು, ನಿರ್ವಹಣೆಯ ಗುತ್ತಿಗೆ ಅವಧಿಯನ್ನು ಮೂವತ್ತಾರು ತಿಂಗಳುಗಳಿಗೆ ಮುಂದುವರೆಸಲು ಸಮಿತಿಯ ಅನುಮತಿ ಕೋರಿರುತ್ತಾರೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:29-03-2012 ರಂದು ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಹಾಗೂ ಪ್ರತಿ 20 ಅಡಿ ಅಂತರದಲ್ಲಿ ಲೋಗೋ ಬಾಕ್ಸ್‌ಗಳಿಗೆ ತಗಲುವ ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡಲು 36 ತಿಂಗಳುಗಳಿಗೆ ದತ್ತು ನೀಡಲು" ತೋಟಗಾರಿಕೆ ಸ್ಥಾಯಿ ಸಮಿತಿಯು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಸದರಿ ತೀರ್ಮಾನದ ಕುರಿತಂತೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-05-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29–09–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (254) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಬೇಕಾದ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಕ್ಕಾಗಿ ದಿನಾಂಕ:15–11–2011 ರಂದು ಟಿಪ್ಪಣಿ ಮಂಡಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ:15–02–2012 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ: ಸಾನ್ಯಾಸ್ಥಾಸ 297/11–12 ರ ನಿರ್ಣಯದಲ್ಲಿ 2010–11ನೇ ಸಾಲಿನ ಕ್ರಿಯಾ ಯೋಜನೆಯಂತೆ ಎಲ್ಲಾ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳದೆ ಹೆಚ್ಚು ಅವಶ್ಯವಿರುವ/ಬೇಡಿಕೆ ಇರುವ ಕಾರ್ಯಕ್ರಮಗಳನ್ನು ಪ್ರತ್ಯೇಕಿಸಿ ಜೊತೆಗೆ ಸಾರ್ವಜನಿಕರಿಗೆ ಉಪಯೋಗವಾಗುವ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದು ಎಂಬುದಾಗಿ ತೀರ್ಮಾನವಾಗಿರುತ್ತದೆ.

ಪಾಲಿಕೆಯ ಕಲ್ಯಾಣ ವಿಭಾಗದಿಂದ ಪರಿಶಿಷ್ಟ ಜಾತಿ/ಪಂಗಡದವರಿಗೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ, ಮಹಿಳೆಯರಿಗೆ, ಸಾಮಾನ್ಯ ವರ್ಗ ಹಾಗು ವಿಕಲಚೇತನರಿಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ತರಬೇತಿ, ಸೌಲಭ್ಯ/ಸವಲತ್ತು, ಆರ್ಥಿಕ ಸಹಾಯ ನೀಡುವಂತಹ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎಲ್ಲಾ ಕಾರ್ಯಕ್ರಮಗಳಿಗೆ ಪ್ರತಿ ವರ್ಷ ಅನುದಾನ ನಿಗಧಿಪಡಿಸಿಕೊಂಡು ಕ್ರಿಯಾಯೋಜನೆ ತಯಾರಿಸಲಾಗುತ್ತಿದ್ದು, ಇವುಗಳ ಪೈಕಿ ಕೆಲವೊಂದು ಕಾರ್ಯಕ್ರಮಗಳಿಗೆ ಸಾರ್ವಜನಿಕರಿಂದ ಹೆಚ್ಚಿನ ಅರ್ಜಿಗಳು ಬರುತ್ತಿಲ್ಲ. ಆದುದರಿಂದ ಈ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗದೇ ಪ್ರತಿ ವರ್ಷ ನಿಗಧಿಪಡಿಸುವ ಅನುದಾನವು ಉಳಿಕೆಯಾಗಿ ಮುಂದಿನ ಸಾಲುಗಳಿಗೆ ಮುಂದುವರೆಸಿಕೊಂಡು ಬರಲಾಗುತ್ತಿದೆ. ಆದ ಕಾರಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನದಂತೆ ಪ್ರಮುಖವಾದ ಕಾರ್ಯಕ್ರಮಗಳನ್ನು ಮಾತ್ರ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ–01 ರಲ್ಲಿ ಪಟ್ಟಿ ಮಾಡಿದೆ ಹಾಗೂ ಕೈಬಿಡಲು ಉದ್ದೇಶಿಸಿರುವ 2012–13ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ–02 ರಲ್ಲಿ ಪಟ್ಟಿ ಮಾಡಿ ಸಮಿತಿಯ ಹಾಗು ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

## ಅನುಬಂಧ-01

## ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ

### I ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-

### ಶೈಕ್ಷಣಿಕ ಕಾರ್ಯಕ್ರಮಗಳು

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ |
| 2) | ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಹಾಗೂ ಹೊಸದಾಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲು |
| 3) | ಸರ್ಕಾರದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ. |
| 4) | ಸರ್ಕಾರದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ |
| 5) | ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ. |
| 6) | ಪಾಲಿಕೆಯ ಪೌರಕಾರ್ಮಿಕ, ಗ್ಯಾಂಗ್ ಮ್ಯಾನ್ ಮತ್ತು ಮಾಲಿಗಳ ಮಕ್ಕಳಿಗೆ ಆರ್ಥಿಕ ಸಹಾಯ |

### ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ |
| 2) | ವಾಹನ ಚಾಲನ ತರಬೇತಿ |
| 3) | ಹೊಲಿಗೆ ತರಬೇತುದಾರರಿಗೆ ಶಿಷ್ಯವೇತನ (ಸ್ಟೈಫೆಂಡ್) |
| 4) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ-(ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯ ಧನ) |
| 5) | ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ ಮೈಕ್ರೋ ಕ್ರೆಡಿಟ್ ಯೋಜನೆಗೆ ಸಹಾಯ ಧನ |
| 6) | ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿವಿಕಾಸ ಕಾರ್ಯಾಗಾರ ನಡೆಸಲು |
| 7) | ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿರುವ ಶಾಲಾ / ಕಾಲೇಜು ಮಕ್ಕಳಿಗೆ ವೃತ್ತಿ ತರಬೇತಿ (ಟಿ.ವಿ./ವೀಡಿಯೋ ಮೆಕ್ಯಾನಿಕ್, ಪ್ಲಂಬರ್/ಎಲ್ಕ್ರೀಷಿಯನ್/ಮೊಬೈಲ್/ಲ್ಯಾಬ್ ಟೆಕ್ನೀಷಿಯನ್) |
| 8) | ವಿವಿಧ ವೃತ್ತಿಯಲ್ಲಿ ತೊಡಗಿರುವವರಿಗೆ ಬೈಸೈಕಲ್ ವಿತರಣೆ |

..................3

## ಇತರೆ ಕಾರ್ಯಕ್ರಮಗಳು

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲು |
| 2) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬದ ಮಕ್ಕಳಿಗೆ ಶಿಶುವಿಹಾರ/ ಬಾಲವಾಡಿಗಳನ್ನು ನಿರ್ಮಿಸಲು ಅನುದಾನ. |
| 3) | ವೈದ್ಯಕೀಯ ಸಹಾಯ / ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ |
| 4) | ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳು. |
| 5) | ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು. |
| 6) | ಪಾಲಿಕೆ ವ್ಯಾಪ್ತಿಯಲ್ಲಿ ವಾಸವಾಗಿರುವ ಸಫಾಯಿ ಕರ್ಮಚಾರಿಗಳ ಸಮೀಕ್ಷೆಯನ್ನು ನಡೆಸಲು. |
| 7) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಾಂದ್ರಿತ ಪ್ರದೇಶಗಳಲ್ಲಿ ಗ್ರಂಥಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, |

## II. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ |
| 2) | ವಾಹನ ಚಾಲನ ತರಬೇತಿ |
| 3) | ಹಿಂದುಳಿದ ವರ್ಗಗಳ ಸಮುದಾಯದ ವೃತ್ತಿ ನಿರತರಿಗೆ ಅವರವರ ಕಸಬುಗಳಿಗೆ ಆರ್ಥಿಕ ಸಹಾಯ |
| 4) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ |
| 5) | ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಮರುಪಾವತಿ |
| 6) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ |
| 7) | ಹಿಂದುಳಿದ ವರ್ಗಗಳ ನಿರ್ದೇಶನಾಲಯ ನಡೆಸುತ್ತಿರುವ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ವಿದ್ಯಾರ್ಥಿನಿಲಯಗಳ ಅಭಿವೃದ್ಧಿ |
| 8) | ಎರಡು ಚಕ್ರದ ಸೈಕಲ್ ವಿತರಣೆ |

## III. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು:-

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್/ ತರಬೇತಿ ಶಿಕ್ಷಕರು / ಮೇಲ್ವಿಚಾರಕರು / ದುರಸ್ಥಿಗಾರರಿಗೆ ಸಿಬ್ಬಂದಿಗಳಿಗೆ ಗೌರವ ಧನ. |
| 2) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ |

..................4

| | |
|---|---|
| 3) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ |
| 4) | ಹೊಲಿಗೆ/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿದಾರರಿಗೆ ಶಿಷ್ಯ ವೇತನ |
| 5) | ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಮತ್ತು ಹಾಲಿ ಕೇಂದ್ರಗಳಿಗೆ ಉಪಕರಣಗಳನ್ನು ಒದಗಿಸಲು |
| 6) | ಶೃಂಗಾರ ತರಬೇತಿ/ಗೃಹ ನಿರ್ವಹಣೆ ತರಬೇತಿ |
| 7) | ಅಪೆರಲ್ ಟ್ರೈನಿಂಗ್ & ಡಿಸೈನ್ ಸೆಂಟರ್ ಕೇಂದ್ರಗಳನ್ನು ಪ್ರಾರಂಭಿಸಲು |
| 8) | ಮಹಿಳಾ ಸ್ವಸಹಾಯ ಗುಂಪಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಸಹಾಯಧನ |
| 9) | ಮಹಿಳಾ ಪೌರಕಾರ್ಮಿಕ ವರ್ಗದವರಿಗೆ ಆರೋಗ್ಯ ಸ್ವಚ್ಚತೆಗೆ ಸಹಾಯಧನ |
| 10) | ನಿರ್ಗತಿಕ, ನೊಂದ, ದುರ್ಬಲ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಮಹಿಳಾ ಸಹಾಯ ಹಸ್ತ ಕೇಂದ್ರಗಳನ್ನು ಪ್ರಾರಂಭಿಸಲು (ಸ್ವಯಂ ಸಂಸ್ಥೆಗಳೊಂದಿಗೆ) |
| 11) | ಅಂಗನವಾಡಿ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ |
| 12) | ಮಹಿಳಾ ಹಕ್ಕುಗಳ ಕಾರ್ಯಗಾರ |
| 13) | ಮಹಿಳೆಯರು ಸ್ವಂತ ಉದ್ಯೋಗ ಪ್ರಾರಂಭಿಸಲು ಸೀರೆ ವಿನ್ಯಾಸ, ಜರ್ದೋಷಿ ತರಬೇತಿ, ಮತ್ತು ಕಾಗದದ ಕೈಚೀಲಗಳ ತಯಾರಿಕೆ ಬಗ್ಗೆ ತರಬೇತಿ ನೀಡುವುದು. |

**IV ವಿಕಲಚೇತನರ ಹಾಗೂ ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-**

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| | ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು |
| 1) | ವಿಕಲಚೇತನರಿಗೆ ವಿವಿಧ ಉಪಕರಣಗಳನ್ನು ಒದಗಿಸುವುದು ಹಾಗು ಹೆಚ್ಚುವರಿ ಚಕ್ರ ಅಳವಡಿಸಿರುವ ದ್ವಿ ಚಕ್ರ ವಾಹನ ನೀಡುವುದು. |
| 2) | ವಿಕಲಚೇತನರಿಗೆ ಸೇವಾ ಕೇಂದ್ರಗಳು ಪ್ರಾರಂಭಿಸುವುದು (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 3) | ಮಾನಸಿಕ ಅಸ್ವಸ್ಥರಿಗೆ ಧನ ಸಹಾಯ |
| 4) | ಪಾಲಿಕೆ ವ್ಯಾಪ್ತಿಯಲ್ಲಿನ ವಿಕಲಚೇತನರ ಸಮೀಕ್ಷೆ ಮಾಡುವುದು. |
| | **ಸಾಮಾನ್ಯ ವರ್ಗ ಹಾಗು ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು** |
| 5) | ಹಿರಿಯ ನಾಗರೀಕರಿಗೆ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮ/ವೈದ್ಯಕೀಯ ಸೇವೆ |
| 6) | ಹಿರಿಯ ನಾಗರೀಕರಿಗೆ ಸೌಲಭ್ಯ ಕೇಂದ್ರ (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 7) | ಹಿಜ್ಡಿಡಾ/ಲೈಂಗಿಕ ಕಾರ್ಯಕರ್ತರು ಹಾಗೂ ಇತರೆ ವರ್ಗದವರಿಗೆ ಸಹಾಯ (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 8) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಪಾವತಿಸಲು (ಪೂರ್ವ ವಲಯಕ್ಕೆ ಮಾತ್ರ) |
| 9) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರಕ್ಕೆ ಉಪಕರಣಗಳ ಸರಬರಾಜು (ಪೂರ್ವ ವಲಯಕ್ಕೆ ಮಾತ್ರ) |
| 10) | ಶಿಷ್ಯ ವೇತನ-ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತುದಾರರಿಗೆ (ಪೂರ್ವ ವಲಯಕ್ಕೆ ಮಾತ್ರ) |
| 11) | ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮ. |

................5

## ಅನುಬಂಧ-02

## ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳದೆ ಕೈಬಿಡಲು ಉದ್ದೇಶಿಸಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ

### 1) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-

### ಶೈಕ್ಷಣಿಕ ಕಾರ್ಯಕ್ರಮಗಳು:-

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸರ್ಕಾರದಿಂದ ಮಾನ್ಯತೆ ಪಡೆದ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮೆರಿಟ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ |
| 2) | ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ |
| 3) | ಕ್ರೀಡಾ ಚಟುವಟಿಕೆಗಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ. |
| 4) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಜೆ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಶಾಲಾ/ಕಾಲೇಜುಗಳಿಗೆ ಆರ್ಥಿಕ ಸಹಾಯ. |
| 5) | ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿರುವ ಶಾಲಾ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ (ಪ್ರೇರಣೆ) |
| 6) | ವಿದ್ಯಾರ್ಥಿಗಳ ಶೈಕ್ಷಣಿಕ/ಅಧ್ಯಯನ ಪ್ರವಾಸಗಳಿಗೆ ಅದರ ವೆಚ್ಚವನ್ನು ಭರಿಸುವುದು. |
| 7) | ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ. |
| 8) | ಪದವಿ ಪೂರ್ವ ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡುವ ಕಾರ್ಯಕ್ರಮ. |

### ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಗಣಕಯಂತ್ರ ಹಾರ್ಡ್‌ವೇರ್ ತರಬೇತಿ |
| 2) | ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ |
| 3) | ಹೊಲಿಗೆ ತರಬೇತುದಾರರಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು |
| 4) | ಕಾಲ್ ಸೆಂಟರ್ / ಬಿ.ಪಿ.ಓ. ಸೆಂಟರ್ ತರಬೇತಿ |
| 5) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಸಹಯೋಗದ ವಸತಿ ನಿರ್ಮಾಣಕ್ಕಾಗಿ ಸಹಾಯ ಧನ |
| 6) | ಸಫಾಯಿ ಕರ್ಮಚಾರಿ, ಚರ್ಮಕಾರರು, ಕೊಳಚೆ ಪ್ರದೇಶಗಳ ನಿವಾಸಿಗಳು ಹಾಗೂ ಇತರರಿಗೆ ವಿಮಾ ಯೋಜನೆ |
| 7) | ಆಟೋ ಚಾಲಕರಿಗೆ ಸಾಮೂಹಿಕ ವಿಮೆ |
| 8) | ನೇಮಕಾತಿ ಪ್ರಾಧಿಕಾರ ಹಾಗೂ ಇತರೆ ಹುದ್ದೆಗಳ ನೇಮಕಾತಿಗಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ಆರ್ಥಿಕ ಸಹಾಯ. |

..................6

| | |
|---|---|
| 9) | ಜಿ.ಟಿ.ಟಿ.ಸಿ., ಎನ್.ಟಿ.ಟಿ.ಎಫ್., ಎನ್.ಐ.ಎಫ್.ಟಿ., ಎಸ್.ಎಂ.ಇ., ಹಾಗೂ ಇತರೆ ರಾಜ್ಯ/ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳ ತರಬೇತಿಗೆ ಅಭ್ಯರ್ಥಿಗಳ ಪ್ರಾಯೋಜನೆ. |
| 10) | ಸರ್ಕಾರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ನಿವೇಶನಗಳು/ಉದ್ದಿಮೆ ಶೆಡ್‌ಗಳ ಸ್ವಾಧೀನಕ್ಕೆ ಸಹಾಯಧನ ನೀಡುವ ಕಲ್ಯಾಣ ಕಾರ್ಯಕ್ರಮ. |
| 11) | ಹೊಸ ವಾರ್ಡ್‌ಗಳಲ್ಲಿ ಖಾಸಗಿಯಾಗಿ ಹೊಲಿಗೆ ತರಬೇತಿ ಪಡೆದವರಿಗೆ (ನಗರ ಪಾಲಿಕೆಯಿಂದ ತರಬೇತಿ ಪಡೆಯದೆ ಇರುವವರಿಗೆ) ಹೊಲಿಗೆ ಯಂತ್ರಗಳನ್ನು ಒದಗಿಸುವುದು. |
| 12) | ಮಾನವ ಸಂಪನ್ಮೂಲ ಅಭಿವೃದ್ಧಿ (ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ & ಕೆಪ್ಯಾಸಿಟಿ ಬಿಲ್ಡಿಂಗ್) |

**ಇತರೆ ಕಾರ್ಯಕ್ರಮಗಳು**

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಪಾಲಿಕೆ ವ್ಯಾಪ್ತಿಯಲ್ಲಿನ ಪ.ಜಾ/ಪ.ಪಂ. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಇತರೆ ಸ್ಥಿತಿಗತಿಗಳ ಕುರಿತು ಸಮೀಕ್ಷೆ ನಡೆಸುವುದು. |
| 2) | ಮದ್ಯಪಾನ ಅಭ್ಯಾಸ ತ್ಯಜಿಸಲು ಮದ್ಯಪಾನ ನಿಷೇಧ ಕಾರ್ಯಕ್ರಮ |
| 3) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಲಾ/ಕಾಲೇಜು ಮಕ್ಕಳಿಗೆ ಆರೋಗ್ಯ ವಿಮೆ |

**(2) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-**

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಕಾಲ್ ಸೆಂಟರ್/ಬಿ.ಪಿ.ಓ. ಸೆಂಟರ್ ತರಬೇತಿ |
| 2) | ಗಣಕಯಂತ್ರ ಹಾರ್ಡ್‌ವೇರ್ ತರಬೇತಿ |
| 3) | ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ |
| 4) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಸಹಯೋಗದ ವಸತಿ ನಿರ್ಮಾಣಕ್ಕಾಗಿ ಸಹಾಯ ಧನ |
| 5) | ಕೊಳಚೆ ಪ್ರದೇಶಗಳ ನಿವಾಸಿಗಳು ಹಾಗೂ ಇತರರಿಗೆ ವಿಮಾ ಯೋಜನೆ |
| 6) | ಆಟೋ ಚಾಲಕರಿಗೆ ಸಾಮೂಹಿಕ ವಿಮೆ |
| 7) | ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಮಕ್ಕಳುಗಳಿಗೆ ಕಲ್ಯಾಣ ಕಾರ್ಯಕ್ರಮಗಳು. |
| 8) | ಮಾನವ ಸಂಪನ್ಮೂಲ ಅಭಿವೃದ್ಧಿ (ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ & ಕೆಪ್ಯಾಸಿಟಿ ಬಿಲ್ಡಿಂಗ್) |

**3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು:-**

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | 18 ವರ್ಷದೊಳಗಿನ ಅನಾಥ, ನಿರ್ಗತಿಕ, ಮಾನಸಿಕ ಅಸ್ವಸ್ಥರ ಮಕ್ಕಳಿಗೆ ನಡೆಸಲಾಗುವ ಸಂಸ್ಥೆಗಳಿಗೆ ಸಹಾಯಧನ ನೀಡುವುದು. |
| 2) | 14 ವರ್ಷದೊಳಗಿನ ಬಾಲಕಾರ್ಮಿಕರಿಗೆ, ಅನಾಥ ಮಕ್ಕಳಿಗೆ ವಿಶೇಷ ತರಬೇತಿ ಹಾಗೂ ಶೈಕ್ಷಣಿಕ ಕಾರ್ಯಕ್ರಮ. |
| 3) | ಹೊಸ ವಾರ್ಡ್‌ಗಳಲ್ಲಿ ಖಾಸಗಿಯಾಗಿ ತರಬೇತಿ ಪಡೆದವರಿಗೆ (ನಗರ ಪಾಲಿಕೆಯಿಂದ ತರಬೇತಿ ಪಡೆಯದೇ ಇರುವವರಿಗೆ) ಹೊಲಿಗೆ ಯಂತ್ರಗಳನ್ನು ಒದಗಿಸುವುದು. |
| 4) | ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ತರಬೇತಿಗೆ ಅಭ್ಯರ್ಥಿಗಳ ನಿಯೋಜನೆ. |

ತತ್ಸಂಬಂಧವಾಗಿ ಈ ಮೇಲ್ಕಂಡ ಅಂಶಗಳನ್ನು ಸಮಿತಿಯ ಆದ್ಯಗಮನಕ್ಕೆ ತರುತ್ತಾ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಹಾಗು ಕೈ ಬಿಡಲು ಉದ್ದೇಶಿಸಿರುವ ಕಾರ್ಯಕ್ರಮಗಳ ಬಗ್ಗೆ ಅನುಮೋದನೆ ಕೋರಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:16–08–2012ರ ಟಿಪ್ಪಣಿ ಹಾಗೂ ದಿನಾಂಕ:16–08–2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಹಾಗೂ ಮೀಸಲಿಟ್ಟಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸುದೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:28–08–2012ರ ನಿರ್ಣಯ.

- ಹೆಚ್ಚು ಬೇಡಿಕೆಯಿರುವ ಅನುಬಂಧ–1ರಲ್ಲಿರುವ ಕಾರ್ಯಕ್ರಮಗಳಿಗೆ ಮಹತ್ವ ನೀಡಿ ಕ್ರಿಯಾ ಯೋಜನೆ ತಯಾರಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.
- ಅನುಬಂಧ–2 ರ ಕಾರ್ಯಕ್ರಮಗಳಿಗೆ ಒಂದು ವೇಳೆ ಬೇಡಿಕೆ ಬಂದಲ್ಲಿ, ಪರಿಶೀಲಿಸಿ ಅಗತ್ಯವಿರುವ ಅನುದಾನವನ್ನು ಕ್ರಿಯಾ ಯೋಜನೆ ರೂಪಿಸುವಾಗ **"ಇತರೇ ಕಾರ್ಯಕ್ರಮಗಳು"** ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ಮೀಸಲಿಟ್ಟು, ಜಂಟಿ ಆಯುಕ್ತರು (ಕಲ್ಯಾಣ) ರವರಿಂದ ಅನುಮತಿ ಪಡೆದು ಅನುಷ್ಠಾನಗೊಳಿಸುವುದು. (ಪಿ–2023)
- ಆಯವ್ಯಯ ಮಂಡನೆಯಲ್ಲಿ ಘೋಷಣೆಯಾದ ಹೊಸ ಕಾರ್ಯಕ್ರಮಗಳಿಗೂ ಸಹ ಮಾರ್ಗಸೂಚಿ ತಯಾರಿಸಿ ಈ ಸಾಲಿನಲ್ಲೇ ಅನುಷ್ಠಾನಗೊಳಿಸುವುದು.
- ಅನುಬಂಧ–1ರಲ್ಲಿರುವ ಕಾರ್ಯಕ್ರಮಗಳನ್ನು ಎಲ್ಲಾ ವಾರ್ಡಗಳ ಸದಸ್ಯರುಗಳಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡಿ, ಪ್ರಚುರಪಡಿಸುವುದು.
- ಆರ್ಥಿಕ ಸ್ವಾವಲಂಭನೆ ಯೋಜನೆಯಡಿ ಎಲ್ಲಾ ವರ್ಗದ ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗ ಪ್ರಾರಂಭಿಸಲು ಪಾಲಿಕೆ ವತಿಯಿಂದ ಕಾರು ಮತ್ತು ಸರಕು ಸಾಗಾಣೆ ವಾಹನವನ್ನು ಖರೀದಿಸಲು ಶೇಕಡ 25 ರಷ್ಟು ಸಹಾಯಧನವನ್ನು ಇದುವರೆವಿಗೂ ನೀಡುತ್ತಿದ್ದು, ಸದರಿ ಸಾಲಿನಲ್ಲಿ ಹೊಸದಾಗಿ ಆಟೋ ರಿಕ್ಷಾಗಳಿಗೂ ಸಹಾಯಧನವನ್ನು ನೀಡಲು ಉದ್ದೇಸಿದ್ದು, ಸರ್ಕಾರದ ವತಿಯಿಂದ ಪರ್ಮಿಟ್ ದೊರೆತಲ್ಲಿ ಆಟೋ ರಿಕ್ಷಾಗಳಿಗೂ ಸಹ ಸಹಾಯಧನವನ್ನು ನೀಡಲಾಗುವುದು.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:28–08–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:28–08–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

**(ಡಿ. ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (218) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 63ರ ವ್ಯಾಪ್ತಿಯಲ್ಲಿ ಬರುವ ಜಯಮಹಲ್ ರಸ್ತೆ – ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗಿನ ರಸ್ತೆಗೆ "ಕರ್ನಲ್ ವಸಂತ್ ವೇಣುಗೋಪಾಲ್ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ: 29-05-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:134(129)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು: ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:07-07-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 63ರ ವ್ಯಾಪ್ತಿಯಲ್ಲಿ ಬರುವ ಜಯಮಹಲ್ ರಸ್ತೆ – ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗಿನ ರಸ್ತೆಗೆ "ಕರ್ನಲ್ ವಸಂತ್ ವೇಣುಗೋಪಾಲ್ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:17-08-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (255) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ನಗರ ವಲಯದ ಹಂದ್ರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 04 (ನಾಲ್ಕು) ಟೆಂಡರ್‌ಗಳು ಸ್ವೀಕೃತವಾಗಿದ್ದು, 03 (ಮೂರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎನ್.ಶ್ರೀನಿವಾಸ ಮೂರ್ತಿ (ಮೆ॥ ಪರಿಚಿತ ಕನ್ಸ್ಟ್ರಕ್ಷನ್) ರವರು ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗೆ ಸಲ್ಲಿಸಿರುತ್ತಾರೆ.

ರೂ.350.00 ಲಕ್ಷಗಳ ಅಂದಾಜು ಪಟ್ಟಿಗೆ 2011-12ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು ಪರಿಸರ ಕೋಶ, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.3,46,19,561.29 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸ ಮೂರ್ತಿ (ಮೆ॥ ಪರಿಚಿತ ಕನ್ಸ್ಟ್ರಕ್ಷನ್) ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ ರೂ.3,13,31,362.00 ಅನುಮೋದಿತ 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ 9.50% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.3.13,31,362.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/335/ಎಮ್‌ಎನ್‌ವೈ/2007 (ಭಾ) ದಿನಾಂಕ:11-05-2009ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/636/ಎಮ್‌ಎನ್‌ವೈ/2010, ಬೆಂಗಳೂರು ದಿನಾಂಕ:02-04-2011 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಜರಾಜೇಶ್ವರಿ ನಗರ ವಲಯದ ಹಂದ್ರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-1 ರ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸ ಮೂರ್ತಿ (ಮೆ॥ ಪರಿಚಿತ ಕನ್ಸ್ಟ್ರಕ್ಷನ್) ರವರು 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 9.50 ರಷ್ಟು ಕಡಿಮೆ ದರಗಳು ಅಥವಾ ರೂ.3,13,31,362.00 (ರೂಪಾಯಿ ಮೂರು ಕೋಟಿ ಹದಿಮೂರು ಲಕ್ಷದ ಮೂವತ್ತೊಂದು ಸಾವಿರದ ಮುನ್ನೂರ ಅರವತ್ತೆರಡು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-08-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:23-08-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:23-08-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:23-08-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 261 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಜಾಹೀರಾತು ಏಜೆನ್ಸಿದಾರರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, ಹೊಸದಾಗಿ ವಾಣಿಜ್ಯ ಜಾಹೀರಾತು ಫಲಕಗಳಿಗಾಗಿ ಮನವಿ ಸಲ್ಲಿಸಿರುವ ಏಜೆನ್ಸಿದಾರರ ಜಾಹೀರಾತು ಫಲಕಗಳಿಗೆ ಅನುಮತಿ ನೀಡಿದಲ್ಲಿ ಪಾಲಿಕೆಗೆ ಜಾಹೀರಾತು ತೆರಿಗೆಯ ರೂಪದಲ್ಲಿ ಸುಮಾರು ರೂ.25.00 ಕೋಟಿ ರೂಗಳವರೆಗೆ ಆದಾಯ ನಿರೀಕ್ಷಿಸಬಹುದಾಗಿದೆ, ಇದರಿಂದ ಅನಧಿಕೃತ ಜಾಹೀರಾತು ಫಲಕಗಳನ್ನು ತಡೆಗಟ್ಟಬಹುದಾಗಿದೆ ಹಾಗೂ ಘನ ಸರ್ಕಾರವು ಸಹ ಆಯವ್ಯಯ ಅನುಮೋದನೆಯ ಸಂದರ್ಭದಲ್ಲಿ ಪಾಲಿಕೆಯು ಆರ್ಥಿಕ ಸಬಲತೆಯನ್ನು ಸಾಧಿಸಲು ತನ್ನಲ್ಲಿಯೇ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ.

ಪಾಲಿಕೆಯ ವಿಷಯ ಸಂಖ್ಯೆ:05(340)/2011-12, ದಿನಾಂಕ:03-03-2012 ರಲ್ಲಿ ಜಾಹೀರಾತು ಬೈಲಾ ನಿಬಂಧನೆಯನ್ನು ಹೊರತಂದು, ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಈಗಾಗಲೇ ನಿರ್ಧರಿಸಿರುವ ದರಗಳಂತೆ, ಜಾಹೀರಾತು ಶುಲ್ಕವನ್ನು ವಿಧಿಸಿ, ಜಾಹೀರಾತು ಸಂಸ್ಥೆಯವರು, ಕೋರಿರುವ 525 ಸ್ಥಳಗಳಲ್ಲಿ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಿಕೊಳ್ಳಲು ಅನುಮತಿಯನ್ನು ನೀಡುವುದು ಮತ್ತು ಇನ್ನೂ ಮುಂದೆ ಜಾಹೀರಾತು ಫಲಕಗಳನ್ನು ಅಳವಡಿಸಲು ಜಾಹೀರಾತು ಸಂಸ್ಥೆಗಳಿಂದ ಅರ್ಜಿಗಳು / ಮನವಿಗಳು ಬಂದಲ್ಲಿ ಸದರಿ ಅರ್ಜಿ / ಮನವಿಗಳನ್ನು ಅನುಮತಿಗಾಗಿ ಸ್ಥಾಯಿ ಸಮಿತಿ / ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಜಾಹೀರಾತು ಏಜೆನ್ಸಿದಾರರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, ಹೊಸದಾಗಿ ವಾಣಿಜ್ಯ ಜಾಹೀರಾತು ಫಲಕಗಳಿಗಾಗಿ ಮನವಿ ಸಲ್ಲಿಸಿರುವ ಏಜೆನ್ಸಿದಾರರ ಜಾಹೀರಾತು ಫಲಕಗಳಿಗೆ ಅನುಮತಿ ನೀಡಿದಲ್ಲಿ ಪಾಲಿಕೆಗೆ ಜಾಹೀರಾತು ತೆರಿಗೆಯ ರೂಪದಲ್ಲಿ ಸುಮಾರು ರೂ.25.00 ಕೋಟಿ ರೂಗಳವರೆಗೆ ಆದಾಯ ನಿರೀಕ್ಷಿಸಬಹುದಾಗಿದೆ, ಇದರಿಂದ ಅನಧಿಕೃತ ಜಾಹೀರಾತು ಫಲಕಗಳನ್ನು ತಡೆಗಟ್ಟಬಹುದಾಗಿದೆ ಹಾಗೂ ಘನ ಸರ್ಕಾರವು ಸಹ ಆಯವ್ಯಯ ಅನುಮೋದನೆಯ ಸಂದರ್ಭದಲ್ಲಿ ಪಾಲಿಕೆಯು ಆರ್ಥಿಕ ಸಬಲತೆಯನ್ನು ಸಾಧಿಸಲು ತನ್ನಲ್ಲಿಯೇ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ.

....................2

ಪಾಲಿಕೆಯ ವಿಷಯ ಸಂಖ್ಯೆ:05(340)/2011-12, ದಿನಾಂಕ: 03-03-2012 ರಲ್ಲಿ ಜಾಹೀರಾತು ಬೈಲಾ ನಿಬಂಧನೆಯನ್ನು ಹೊರತಂದು, ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಈಗಾಗಲೇ ನಿರ್ಧರಿಸಿರುವ ದರಗಳಂತೆ, ಜಾಹೀರಾತು ಶುಲ್ಕವನ್ನು ವಿಧಿಸಿ, ಜಾಹೀರಾತು ಸಂಸ್ಥೆಯವರು, ಕೋರಿರುವ 525 ಸ್ಥಳಗಳಲ್ಲಿ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಿಕೊಳ್ಳಲು ಅನುಮತಿಯನ್ನು ನೀಡುವುದು ಮತ್ತು ಇನ್ನೂ ಮುಂದೆ ಜಾಹೀರಾತು ಫಲಕಗಳನ್ನು ಅಳವಡಿಸಲು ಜಾಹೀರಾತು ಸಂಸ್ಥೆಗಳಿಂದ ಅರ್ಜಿಗಳು / ಮನವಿಗಳು ಬಂದಲ್ಲಿ ಸದರಿ ಅರ್ಜಿ / ಮನವಿಗಳನ್ನು ಅನುಮತಿಗಾಗಿ ಸ್ಥಾಯಿ ಸಮಿತಿ / ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

**(ಡಿ.ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:29-09-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 262 / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಸ ವಿಲೇವಾರಿಯು ಒಂದು ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿದ್ದು, ಈಗಾಗಲೇ ಹಲವಾರು ದಿನಪತ್ರಿಕೆಗಳು ಹಾಗೂ ಪರಿಸರವಾದಿಗಳು ಮಾವಳ್ಳಿಪುರ ಹಾಗೂ ಮಂಡೂರು ಹಾಗೂ ಇತರೆ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಈಗಾಗಲೇ ಮಾವಳ್ಳಿಪುರ ಘಟಕವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿರುತ್ತದೆ. ಆದರೆ ಬೆಂಗಳೂರಿನಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುವನ್ನು ವಿಲೇವಾರಿ ಮಾಡುವ ಅನಿವಾರ್ಯ ಪ್ರಸಂಗ ಒದಗಿ ಬಂದಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಘನತ್ಯಾಜ್ಯ ವಸ್ತುಗಳನ್ನು ಉತ್ಪತ್ತಿ ಮೂಲದಲ್ಲಿಯೇ ಹಸಿ ಮತ್ತು ಒಣ ಕಸವನ್ನಾಗಿ ವಿಂಗಡಿಸಲು ಒಂದು ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸಲುವಾಗಿ ಆಯುಕ್ತರು ಹಾಗೂ ಪಾಲಿಕೆಯಿಂದ ಹಲವಾರು ಪ್ರಕಟಣೆಗಳನ್ನು ಪತ್ರಿಕೆಗಳಲ್ಲಿ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ನೀಡಲಾಗಿದೆ. ಅದರಂತೆ, ದಿನಾಂಕ:01-10-2012 ರಿಂದ ಘನತ್ಯಾಜ್ಯ ವಸ್ತುವನ್ನು ಹಸಿ ಮತ್ತು ಒಣ ಕಸವನ್ನಾಗಿ ವಿಂಗಡಣೆ ಮಾಡುವುದು ಹಾಗೂ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು ಪಾಲಿಕೆಯ ಕರ್ತವ್ಯವಾಗಿರುತ್ತದೆ.

ಹಾಲಿ ಇರುವ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕಗಳು ಸಾರ್ವಜನಿಕರ ಆಕ್ರೋಶಕ್ಕೆ ತುತ್ತಾಗಿದ್ದು, ಅವುಗಳನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವುದು ಅವಶ್ಯಕವಾಗಿರುತ್ತದೆ. ಈ ಘಟಕಗಳ ಮೇಲೆ ಇರುವ ಒತ್ತಡವನ್ನು ಅಂದರೆ ಕಸ ವಿಲೇವಾರಿ ಪ್ರಮಾಣವನ್ನು ತಗ್ಗಿಸಬೇಕಾಗಿದ್ದು, ಈ ಹಿನ್ನಲೆಯಲ್ಲಿ, ಆಯುಕ್ತರು ಕರ್ನಾಟಕ ರ್‍ಯಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದು ಮೂಲದಲ್ಲಿಯೇ ಬೇರ್ಪಡಿಸಿದ ಹಸಿ ಕಸವನ್ನು ಬೆಂಗಳೂರಿನ ಸುತ್ತಮುತ್ತಲಿನ ರೈತಾಪಿ ಜನರಿಗೆ ನೀಡಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ರೀತಿ ವಿಲೇವಾರಿ ಮಾಡುವ ಹಸಿ ತ್ಯಾಜ್ಯಕ್ಕೆ ಪಾಲಿಕೆಯಿಂದ ಒಂದು ಟನ್‌ಗೆ ರೂ.66.00 ಗಳನ್ನು ನೀಡಲು ಉದ್ದೇಶಿಸಲಾಗಿದೆ.

ಆಯುಕ್ತರವರ ಪತ್ರಕ್ಕೆ ಉತ್ತರವಾಗಿ ದಿನಾಂಕ:28-09-2012 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ 20 ಟನ್‌ಗಳಷ್ಟು ಹಸಿ ತ್ಯಾಜ್ಯವನ್ನು ನೀಡಲು ಒಪ್ಪಿಗೆ ನೀಡಿರುತ್ತದೆ ಹಾಗೂ ಈ ರೀತಿ ನೀಡುವ ರೈತರ ಪಟ್ಟಿಯನ್ನು ಸಹ ತಯಾರಿಸಲು ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಬೆಂಗಳೂರಿನಲ್ಲಿ ಉತ್ಪತ್ತಿಯಾಗುವ ಹಸಿ ಕಸವನ್ನು ಬೆಂಗಳೂರಿನ ಸುತ್ತಮುತ್ತಲಿನ ಇರುವ ರೈತರಿಗೆ ಒಂದು ಟನ್‌ಗೆ ರೂ.66.00 ಗಳಂತೆ ಸಂಸ್ಕರಣಾ ವೆಚ್ಚ ನೀಡಲು ಹಾಗೂ ರೈತರಿಗೆ ಒಂದು ಎಕರೆಗೆ 20 ಟನ್‌ಗಳಂತೆ ಪ್ರತಿ ವರ್ಷಕ್ಕೆ ನೀಡುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-09-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:29-09-2012ರ ಟಿಪ್ಪಣಿಯನ್ನು ಒಪ್ಪುವುದು".

..................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:29-09-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು